# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಸಂಚಿಕೆ ೨೬ ಫೆಬ್ರವರಿ ೨೦೨೦



ಬೃಂದಾವನ ವಾಣಿಯ ಇಪ್ಪತ್ತಾರನೇ ಸಂಚಿಕೆ

ಬೃಂದಾವನ

# ಸಂಪಾದಕೀಯ

**ಬೃಂದಾವನ ಕನ್ನಡ ಬಾಂಧವರೇ,**

ಡಿಸೆಂಬರ್ ತಿಂಗಳಿನಲ್ಲಿ ದಾಪುಗಾಲು ಹಾಕಿಕೊಂಡು ಬಂದು ನಮ್ಮನ್ನೆಲ್ಲ ಹೆದರಿಸಿದ್ದ ಚಳಿರಾಯ, ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಸ್ವಲ್ಪ ತಣ್ಣಗಾಗಿ ನಮಗೆಲ್ಲ ಬಿಡುವು ಕೊಟ್ಟಿದ್ದಾನೆಂದೇ ಹೇಳಬೇಕು. ಗ್ಲೋಬಲ್ ವಾರ್ಮಿಂಗ್‌ನ ದೆಸೆಯಿಂದಲೋ, ಅಥವಾ ನಮಗೆ ತಿಳಿಯದ ಈ ನಿಸರ್ಗದ ಮಾಯೆಯೋ - ನಮ್ಮಲ್ಲಿ ವರ್ಷದಿಂದ ವರ್ಷಕ್ಕೆ ಚಳಿಯ ಬಿರುಸು ಸ್ವಲ್ಪ ಕಡಿಮೆಯಾಗುತ್ತಿರುವ ಅನುಭವ ಕಳೆದ ಕೆಲವು ವರ್ಷಗಳಿಂದ. ಒಮ್ಮೊಮ್ಮೆ ಸುರಿದರೆ ಧೋ ಎಂದು ಬೀಳುವ ಮಳೆ, ಕೆಲವೊಮ್ಮೆ ಒಂದು ಅಡಿಯಷ್ಟು ಬಿದ್ದ ಹಿಮದ ಪ್ರಮಾಣವನ್ನು ಬಿಟ್ಟರೆ, ನಮ್ಮ ವಿಂಟರ್ ತಿಂಗಳುಗಳು ಬರೀ ಬೂದಿ ಬಣ್ಣದ ನೆರೆಹೊರೆಯ ಚಿತ್ರಣವನ್ನು ನಿರಂತರವಾಗಿ ಶೋಭಿಸುವ ಸೀಜನ್ನಿನ ಭಾಗವಾಗಿ ಹೋಗಿವೆ. ಒಟ್ಟಿನಲ್ಲಿ ಕಡಿಮೆ ಆಗುತ್ತಿರುವ ಚಳಿಯ ಪ್ರಮಾಣವನ್ನೂ ನಾವು ನೆನೆದು ಕೊರಗುವಂತಾಗಿರುವುದು ಈ ದಿನಗಳ ವಿಶೇಷ ಎನ್ನಬಹುದು.


ಜನವರಿ ತಿಂಗಳಲ್ಲಿ ಹಮ್ಮಿಕೊಂಡ ಹೊಸ ಕನ್ನಡ ಶಾಲೆಯ ಉದ್ಘಾಟನೆ ಮತ್ತು ಸಂಕ್ರಾಂತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಿಮಗೆಲ್ಲ ಧನ್ಯವಾದಗಳು. ಈ ವರ್ಷದ ವಿಶೇಷವೆಂದರೆ ಈ ಎರಡೂ ಕಾರ್ಯಕ್ರಮಗಳೂ ಹೊಸದಾಗಿ ಹಮ್ಮಿಕೊಂಡಂತವು. 'ಎಳ್ಳು-ಬೆಲ್ಲವನ್ನು ತಿಂದು ಒಳ್ಳೊಳ್ಳೆ ಮಾತನಾಡುವ' ಸಂಕ್ರಾಂತಿ ಕಾರ್ಯಕ್ರಮದ ಸಂಪ್ರದಾಯ ಹೀಗೆ ಮುಂದುವರೆಯುತ್ತಿರಲಿ. ಏಪ್ರಿಲ್ ೧೮ರ ಶನಿವಾರ ಹೈಟ್ಸ್‌ಟೌನ್ ಹೈ ಸ್ಕೂಲ್ ಸಭಾಂಗಣದಲ್ಲಿ ಈ ವರ್ಷದ ವಸಂತೋತ್ಸವದ ಕಾರ್ಯಕ್ರಮದಲ್ಲಿ ತಾವೆಲ್ಲರೂ ತಪ್ಪದೇ ಭಾಗವಹಿಸಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ.

ನಮ್ಮ ಕರ್ನಾಟಕದಲ್ಲಿ ಸ್ಥಿರ ಸರ್ಕಾರ ಬಂದು ಎಲ್ಲವೂ ಸರಿಹೋಗಬಹುದು ಎಂಬ ಭಾವನೆಯಲ್ಲಿದ್ದ ಜನಸಾಮಾನ್ಯರಿಗೆ, ಗೊಂದಲ ಇನ್ನೂ ಹೆಚ್ಚಾಗಿದೆ. ಇತ್ತೀಚೆಗೆ ವಿಸ್ತರಣೆಗೊಂಡ ಮಂತ್ರಿಮಂಡಲ, ಅದರ ಜೊತೆಯಲ್ಲಿ ತಮಗೆ ಬೇಕಾದ ಸ್ಥಾನ ಅಥವಾ ಕುರ್ಚಿ ಸಿಗದ 'ಅತೃಪ್ತ' ಶಾಸಕರು ಮತ್ತೆ ಸುದ್ದಿಗೆ ಬಂದಿದ್ದಾರೆ. ಈ ಅತೃಪ್ತರು ಎಲ್ಲಿದ್ದರೂ ಹೇಗಿದ್ದರೂ ಅತೃಪ್ತರೇ ಎನ್ನುವಷ್ಟರ ಮಟ್ಟಿಗೆ ಅವರ ನಡೆ-ನುಡಿಯಿಂದ ವ್ಯಕ್ತವಾಗುತ್ತಿದೆ. ಇನ್ನೊಂದಿಷ್ಟು ದಿನಕಳೆದರೆ ಇವರೆಲ್ಲ ಬಂಡಾಯ ಬಿದ್ದು ಮತ್ತೆ ಆಡಳಿತ ಸೂತ್ರವನ್ನು ನೆನೆಗುದಿಗೆ ತಳ್ಳುವ ಹುನ್ನಾರವಿದ್ದರೂ ಇರಬಹುದು. ಈ ನಡುವೆ ರಾಜ್ಯದ ಉದ್ದಗಲಕ್ಕೆ ಕೋಮು ದಳ್ಳುರಿ ವ್ಯಾಪಕವಾಗುತ್ತಿದೆ. ಇಂದಿನ ಯುವಜನತೆ ಇತ್ತೀಚೆಗೆ ಅಂಗೀಕೃತವಾದ ಕೇಂದ್ರದ ನಾಗರೀಕ ಸತ್ತೆಯನ್ನು ಅನುಮಾನದಿಂದ ನೋಡುತ್ತಿದೆ. ಅನುಮಾನದ ಪರಿಹಾರ ಒಂದು ಕಡೆಯಾದರೆ, ಈ ಅಸ್ಥಿರತೆಯ ದುರುಪಯೋಗ ಮತ್ತೊಂದು ಕಡೆ. ಒಟ್ಟಿನಲ್ಲಿ ಇಂದಿನ ಕೈಗೆಟುಕುವ ಇನ್‌ಫರ್ಮೇಷನ್ ಯುಗದಲ್ಲೂ ಇನ್ನೂ ಅನಾಗರೀಕರಂತೆ ವರ್ತಿಸುವ ಈ ಕೆಲವು ಯುವಕರನ್ನು ನೋಡಿದರೆ ಅಸಹ್ಯವಾಗುತ್ತದೆ. ಈ ಮೇಲಾಗಿ ನೆರೆಯ ದೇಶದ ಜಯಕಾರದ ಮೆರವಣಿಗೆ ಮತ್ತೊಂದು ಕಡೆ, ಒಟ್ಟಿಗೆ ಇಂದಿನ ಯುವಕರು ಅದ್ಯಾವ ಪ್ರಭಾವಕ್ಕೆ ಒಳಗಾಗಿ ಈ ರೀತಿ ವರ್ತಿಸುತ್ತಿದ್ದಾರೆ ಎಂದು ಸಂಕಟ ಪಡುವಂತಾಗುತ್ತದೆ.

ರಾಷ್ಟ್ರದ ನೆಲೆಗಟ್ಟಿನಲ್ಲಿ ಗಜಪ್ರಸವವನ್ನು ನೆನಪಿಸುವ ಒಂದು ಭಾರೀ ಬಜೆಟ್ಟು, ಅನೇಕ ವ್ಯತಿರಿಕ್ತ ಮನಸ್ಥಿತಿಗಳನ್ನು ಹುಟ್ಟಿಸಿ ಹಲವಾರು ಬಿರುಕುಗಳನ್ನು ಸೃಷ್ಟಿಸುವ ಕಮ್ಯೂನಿಕೇಷನ್ ಗ್ಯಾಪ್ ಇದ್ದಂತ ನಾಗರೀಕ ಸತ್ತೆಯ ಬಿಡುಗಡೆ - ಇವೆಲ್ಲ ಮೋದಿಯವರ ಎರಡನೇ ಅವಧಿಯನ್ನು ಒಂದು ಕೆಟ್ಟ ಆರಂಭದಲ್ಲಿ ಕಟ್ಟಿ ಹಾಕಿವೆ. ಮೂಲಭೂತ ಸಮಸ್ಯೆಗಳನ್ನು ನಿರ್ಮೂಲನ ಮಾಡುವುದು ಅಷ್ಟೊಂದು ಸುಲಭದ ಕೆಲಸವಲ್ಲ, ಇಂಥ ಭಾರೀ ಯೋಜನೆಗಳ ಕನಸನ್ನು ಸಾಕಾರ ಮಾಡಿಕೊಂಡಿರುವ ಮೋದಿ ಮತ್ತು ತಂಡ ನಿಜವಾಗಿಯೂ ದೂರಾಲೋಚನೆಯ ದೃಷ್ಟಿಯಿಂದ ಯಶಸ್ವಿಯಾಗಿದೆ. ಆದರೆ, ಪ್ರಣಾಳಿಕೆಗಳ ಎಕ್ಸಿಕ್ಯೂಷನ್‌ನಲ್ಲಿ ಸ್ವಲ್ಪ ಎಡವಿದಂತೆ ಗೋಚರಿಸುತ್ತದೆ.

ಈ ಕಂತಿನ ಬೃಂದಾವನ ವಾಣಿ ಚಳಿಗಾಲದ ದಿನಗಳ ಮೆಲುಕು ಹಾಕುವ ಬರಹಗಳನ್ನು ಹೊತ್ತು ತರುತ್ತಿದೆ. ದಯವಿಟ್ಟು ಈ ಸಂಚಿಕೆಯನ್ನು ನಿಮ್ಮ ಸ್ನೇಹಿತರೊಂದಿಗೆ ಹಂಚಿಕೊಳ್ಳಿ, ಹಾಗೂ ಈ ಸಂಚಿಕೆಯ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಖಂಡಿತವಾಗಿ ತಿಳಿಸಿ.


**ಸತೀಶ್ ಹೊಸನಗರ**



ಪ್ರಧಾನ ಸಂಪಾದಕ
ಸಂಪಾದಕ ಮಂಡಳಿ.


## ಸಂಪಾದಕ ಮಂಡಳಿ:

**ದಾಶರಥಿ ಘಟ್ಟು, ಅಜೇಯ ರಾವ್, ಲಕ್ಷ್ಮಿ ಕೋಲಾಲ, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ, ಶ್ರೀವತ್ಸ ಕುಲಕರ್ಣಿ**

**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org



© 2020. All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು


ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org

# ಈ ಸಂಚಿಕೆಯಲ್ಲಿ


೦೨ ಸಂಪಾದಕೀಯ




೦೬ ಅಧ್ಯಕ್ಷರ ನುಡಿ



೦೮ ಸಂಕ್ರಾತಿ ಸಂಭ್ರಮ



೧೪ ಸುಮ್ಮನೆ ಪಲ್ಯ



೧೨ ಆರಿದ ನಂದಾದೀಪ



೧೦ ಕ್ರೇಜ಼ಿ ಕರೋಕೆ ಗ್ರೂಪ್ (KKG)


**ಮುಖಪುಟ ಕೃಪೆ**

**Incredible Karnataka**

**(ಫೇಸ್ಬುಕ್ ಪೇಜ್ನಿಂದ)**



೧೬ ಚಿಣ್ಣರ ಚಿತ್ರಗಳು



೨೭ ಕವನ - ವರುಷವಿಪ್ಪತ್ತರ ಎರಡು



೨೦ ಐಸ್ಲ್ಯಾಂಡ್ ಪ್ರವಾಸ



೧೪ ಕವನ - ಓ ನನ್ನ ಪ್ರೇಯಸಿಯೇ!!





೨೮ ಛಾಯಾಚಿತ್ರ

೧೯ ಮೊಳಕೆ

೧೮ ಗೋಧಿ ರವೆ ಉಪ್ಪಿಟ್ಟು

# ಅಧ್ಯಕ್ಷರ ನುಡಿ




ಇತ್ತೀಚೆಗಷ್ಟೇ ಹೊಸ ವರ್ಷವನ್ನು ಆಚರಿಸಿಕೊಂಡ ನಮಗೆ ಈ ವರ್ಷದ ಚಳಿಗಾಲ ಸ್ವಲ್ಪ ಬಿಡುವು ಕೊಟ್ಟಿದ್ದರಿಂದಲೋ ಏನೋ, ದಿನ-ವಾರಗಳು ಬಹಳ ಬೇಗ ಉರುಳಿದಂತೆ ಕಾಣಿಸುತ್ತಿದೆ. ಮುಂಜಾನೆ ಸೂರ್ಯನ ಆಗಮನವೂ ಬೇಗನೇ ಆಗುತ್ತಿದ್ದು ಶಾಲೆ-ಆಫೀಸು ಹೋಗುವವರಿಗೆಲ್ಲ ಒಂದು ರೀತಿಯಲ್ಲಿ ಸೂರ್ಯೋದಯದ ದರ್ಶನವಾಗುವಂತ ದಿನಗಳು ಎಂದೇ ಹೇಳಬೇಕು. ಈ ರೀತಿ ಒಂದು ಒಪ್ಪಂದದ ವ್ಯವಸ್ಥೆಗೆ ಇನ್ನೇನು ಹೊಂದಿಕೊಳ್ಳುತ್ತಿದ್ದೇವೆ ಎನ್ನುವಷ್ಟರಲ್ಲಿ ಡೇ ಲೈಟ್ ಸೇವಿಂಗ್ಸ್ (ಮಾರ್ಚ್ ೮) ಅನ್ನೋ ಹೆಸರಿನಲ್ಲಿ ಸಮಯವನ್ನು ಬದಲಾಯಿಸುವುದರಿಂದ, ನಮಗೆಲ್ಲ ಒಂದಿಷ್ಟು ಕಸಿವಿಸಿ ಆಗುವುದಂತೂ ಗ್ಯಾರಂಟಿ. ಹೀಗೆ ನಮ್ಮ ನ್ಯೂ ಜೆರ್ಸಿಯ ಬದುಕು ಎಲ್ಲ ಸೀಜನ್‌ಗಳಲ್ಲೂ ನಮ್ಮನ್ನು ನಾವು ಬದಲಾವಣೆಗೆ ಒಗ್ಗಿಕೊಳ್ಳುವಂತೆ ಮಾಡುತ್ತದೆ.

ಈ ವರ್ಷದ ಬೃಂದಾವನದ ಕಾರ್ಯಕ್ರಮಗಳು ಅದ್ದೂರಿಯಿಂದ ಆರಂಭವಾಗಿವೆ. ಜನವರಿ ೧೧ರಂದು ನಮ್ಮ ಕನ್ನಡ ಶಾಲೆಯ ಐದನೇ ಶಾಖೆಯನ್ನು ಮಾರ್ಲ್‌ಬರೋ ನಲ್ಲಿ ಆರಂಭಿಸಿದೆವು. ಪ್ರಸ್ತುತ ರಾಜಕೀಯದಲ್ಲಿ ಸಕ್ರಿಯವಾಗಿರುವ ಕನ್ನಡಿಗ ಶ್ರೀ ಗೌತಮ್ ಜೋಯ್ಸ್ ಹಾಗೂ ಶ್ರೀ ಶೇಷಾದ್ರಿ ಮೋಕ್ಷಗುಂಡಂ ಅವರು ಉದ್ಘಾಟನೆ ಮಾಡಿದಂತಹ ಈ ಶಾಲೆಯಲ್ಲಿ ಅನೇಕ ಮಕ್ಕಳು ಕನ್ನಡ ಕಲಿಯುತ್ತಿರುವುದು ಹೆಮ್ಮೆಯ ಸಂಗತಿ. ಹೀಗೇ ನಮ್ಮ ಕನ್ನಡದ ಸೇವೆ ಮುಂದುವರೆಯುತ್ತಿರಲಿ. ಸರಿಯಾದ ಸ್ಥಳಾವಕಾಶ ಮತ್ತು ಸಕ್ರಿಯವಾಗಿ ಭಾಗವಹಿಸುವ ಮಕ್ಕಳು ಜೊತೆಗೆ ಕಾರ್ಯಕರ್ತರು ಜೊತೆಗೂಡಿದರೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಶಾಲೆಗಳನ್ನು ತೆರೆಯಬಹುದು.

ಈ ವರ್ಷದ ಜನವರಿಯಲ್ಲಿ ಮೊಟ್ಟ ಮೊದಲನೇ ಬಾರಿಗೆ ಬೃಂದಾವನದ ವತಿಯಿಂದ ಸಂಕ್ರಾಂತಿ ಹಬ್ಬವನ್ನು ಆಚರಿಸಿದೆವು. ಪ್ರತಿ ವರ್ಷದಂತೆ ಈ ವರ್ಷವೂ ಹಿಮ ಸುರಿಯಬಹುದು ಎನ್ನುವ ಹೆದರಿಕೆಯಿಂದಲೇ ಕಾರ್ಯಕ್ರಮವನ್ನು ಆಯೋಜಿಸಿಕೊಂಡ ನಮಗೆ, ಭಾರತದಿಂದ ನಮ್ಮ ಅತಿಥಿಯಾಗಿ ಬಂದಂತ ಶ್ರೀಮತಿ ಇಂದುಶ್ರೀ ರವೀಂದ್ರ ಅವರು ಮುಖ್ಯ ಅತಿಥಿಯಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಇಂದುಶ್ರೀ ಅವರು ವೆಂಟ್ರಿಲೋಕ್ವಿಸಮ್‌ನಲ್ಲಿ ಪಳಗಿದ ಕಲಾವಿದೆ. ಅವರ ವಿಶ್ವವಿಖ್ಯಾತ ಗೊಂಬೆಯ ಮೂಲಕ ಮಾತನಾಡುವ ಕಲೆ (ವೆಂಟ್ರಿಲೋಕ್ವಿಸಮ್), ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರನ್ನೂ ರಂಜಿಸಿತು. ಎಳ್ಳು-ಬೆಲ್ಲವನ್ನು ತಿಂದು ಒಳ್ಳೆಯ ಮಾತನ್ನು ಆಡುವ ಸಂಕ್ರಾಂತಿ ಹಬ್ಬದ ವಾರ್ಷಿಕ ಆಚರಣೆಗಳು ಹೀಗೇ ಮುಂದುವರಿಯುತ್ತಿರಲಿ. ಈ ಎರಡೂ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದೀರಿ, ಮುಂದಿನ ಕಾರ್ಯಕ್ರಮಗಳೂ ಸಹ ಹೀಗೆಯೇ ಯಶಸ್ವಿಯಾಗಲಿ.

ಚಳಿಗಾಲದ ಈ ಸಂಚಿಕೆಯಲ್ಲಿ ವೈಚಾರಿಕ ಲೇಖನಗಳು, ಪ್ರಬಂಧ-ಪದ್ಯಗಳು ಮತ್ತು ಮಕ್ಕಳ ಲೇಖನ-ಚಿತ್ರಗಳನ್ನು ಪ್ರಕಟಿಸುತ್ತಿದ್ದೇವೆ. ನಿಮ್ಮ ಅಭಿಪ್ರಾಯಗಳನ್ನು ಎಂದಿನಂತೆ ನಮ್ಮೊಡನೆ ಹಂಚಿಕೊಳ್ಳಿ.

ಈ ವರ್ಷ ಎಂದಿನಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ವಸಂತೋತ್ಸವ, ವನವಿಹಾರ, ಗಣೇಶೋತ್ಸವ ಮತ್ತು ಮಕ್ಕಳ ದಿನಾಚರಣೆಗಳ ಜೊತೆಗೆ ವಿಶೇಷವಾದ ಕಾರ್‍ಯಕ್ರಮವೊಂದನ್ನು ರೂಪಿಸಿ ಪ್ರಸ್ತುತ ಪಡಿಸಲು ಸೌರಭ ತಂಡದ ಪದಾಧಿಕಾರಿಗಳು ಶ್ರಮಿಸುತ್ತಿದ್ದಾರೆ. ಹೆಚ್ಚಿನ ವಿವರಗಳು ಮುಂದೆ ಲಭ್ಯವಾಗಲಿದೆ. ನಮ್ಮ ಮುಂದಿನ ಕಾರ್ಯಕ್ರಮ ಏಪ್ರಿಲ್ ೧೮ರ ಶನಿವಾರ ಬೃಂದಾವನದ ವಸಂತೋತ್ಸವ. ಹೈಟ್ಸ್‌ಟೌನ್ ಹೈಸ್ಕೂಲಿನ ಸಭಾಂಗಣದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ತಾವೆಲ್ಲರೂ ತಪ್ಪದೇ ಭಾಗವಹಿಸಬೇಕಾಗಿ ವಿನಂತಿ... ಮತ್ತೆ ಸಿಗೋಣ.



ಸತೀಶ್ ಹೊಸನಗರ
ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ
ಸೌರಭ ತಂಡದ ಪರವಾಗಿ

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ಸನ್ನಿಧಿ ಬೃಂದಾವನ

**Save the date 4/18/2020.**

## ಬೃಂದಾವನ ವಸಂತೋತ್ಸವ ಏಪ್ರಿಲ್ 18, 2020

ಬೃಂದಾವನ ಕನ್ನಡ ಬಾಂಧವರಿಗೆಲ್ಲ ನಮಸ್ಕಾರಗಳು.

ದಯವಿಟ್ಟು ಏಪ್ರಿಲ್ 18ರ ಶನಿವಾರವನ್ನು ನಮ್ಮ ವಸಂತೋತ್ಸವ ಕಾರ್ಯಕ್ರಮಗಳಿಗೋಸ್ಕರ ಕಾಯ್ದಿರಿಸಬೇಕಾಗಿ ಕೇಳಿಕೊಳ್ಳುತ್ತಿದ್ದೇವೆ.

ಕಾರ್ಯಕ್ರಮ ಎಂದಿನಂತೆ ಹೈಟ್ಸ್ ಟೌನ್ ಹೈ ಸ್ಕೂಲ್ ನಲ್ಲಿ ಇಟ್ಟುಕೊಂಡಿದ್ದೇವೆ, ವಿವರಗಳನ್ನು ಆದಷ್ಟು ಬೇಗ ಹಂಚಿಕೊಳ್ಳುತ್ತೇವೆ.

ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಇಚ್ಛೆ ಉಳ್ಳವರು culturalbrindavana@gmail.com ಸಂಪರ್ಕಿಸಿ.

- members interested in showcasing a cultural program and need a time slot, please email culturalbrindavana@gmail.com with details of theme and category. Slot will be provided depending on availability. Minimum participants should be 5.

- members interested in enrolling themselves or their kids in folk dance performance, please email culturalbrindavana@gmail.com with name and age details.

- members interested in enrolling into singing performances please email culturalbrindavana@gmail.com with name and age details.

Last day to submit participation email is February 24th 2020.



# ಸಂಕ್ರಾಂತಿಗೆ ಮೆರುಗುತಂದ ಇಂದುಶ್ರೀಯವರ ಧ್ವನಿಮಾಯೆ

*ಶ್ರೀವಿದ್ಯಾ ಪ್ರಶಾಂತ್*

"ಮತ್ತೆ ಬಂದಿದೆ ಸಂಕ್ರಾಂತಿ, ಮೂಡಿಸಲೆಂದು ನಮ್ಮೊಳಗೆ ಯಶಸ್ಸಿನ ಕ್ರಾಂತಿ". ಜನವರಿ ತಿಂಗಳ ಉತ್ತರಾಯಣದ ಪರ್ವಕಾಲವನ್ನು ಒಂದಾಗಿ ಸಂಭ್ರಮಿಸಲು ಈ ಬಾರಿ ಬೃಂದಾವನ ಕನ್ನಡ ಕೂಟದ ಸೌರಭ ತಂಡವು ಸಂಕ್ರಾಂತಿ ಹಬ್ಬದ ಪ್ರಯುಕ್ತ ನಮ್ಮ ಕರ್ನಾಟಕದ ಹೆಮ್ಮೆ ಮತ್ತು ಭಾರತದ ಮೊದಲ ಮಹಿಳಾ ಧ್ವನಿಗಾರುಡತಿ ಎಂದೇ ಪ್ರಖ್ಯಾತರಾದ ಇಂದುಶ್ರೀ ರವೀಂದ್ರ ಹಾಗೂ ಅವರ ಗೊಂಬೆಬಳಗದೊಂದಿಗೆ ಕಾರ್ಯಕ್ರಮವೊಂದನ್ನು ಆಯೋಜಿಸಿತ್ತು.

ವರುಷದ ಮೊದಲ ಹಬ್ಬದ ಕಳೆ ಎಲ್ಲರ ಮನವನ್ನೂ ತುಂಬಿತ್ತು. ಬೃಂದಾವನ ಕನ್ನಡ ಕೂಟ-ಸೌರಭ ತಂಡದ ಅಧ್ಯಕ್ಷರಾದ ಮಾನ್ಯ ಶ್ರೀ-ಸತೀಶ್ ಹೊಸನಗರ ಇವರು, ಆಗಮಿಸಿರುವಂತಹ ಎಲ್ಲಾ ಬಂಧು ಮಿತ್ರರಿಗೂ ಸ್ವಾಗತ ಕೋರಿದರು. ಬಳಿಕ ಇತ್ತೀಚೆಗಷ್ಟೇ ನಮ್ಮೆಲ್ಲರನ್ನು ಅಗಲಿದ ಹಿರಿಯ ಚೇತನಗಳಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಮತ್ತು ಹಿರಿಯ ಸಂಶೋದಕ ಡಾ.ಎಂ.ಚಿದಾನಂದ ಮೂರ್ತಿಯವರನ್ನು ನೆನೆದು,ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಎರಡು ನಿಮಿಷಗಳ ಮೌನಾಚರಣೆ ನಡೆಸಲಾಯಿತು. ಸಭಾ ಕಾರ್ಯಕ್ರಮವು ಕುಮಾರಿ ಜಿಯಾ ಮತ್ತು ಕುಮಾರಿ ತ್ರಿಶಾಳ ಸುಮಧುರವಾದ ಪ್ರಾರ್ಥನೆ ಹಾಡಿನೊಂದಿಗೆ ಆರಂಭಗೊಂಡಿತು.



ಅಪರಾಹ್ನ ಸರಿ-ಸುಮಾರು ೨ ಗಂಟೆಯ ವೇಳೆಗೆ ಹಿಲ್ಸ್ ಬರೋ ಮುನ್ಸಿಪಲ್ ಹಾಲ್ ನಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮಕ್ಕೆ ನ್ಯೂಜೆರ್ಸಿಯ ಕನ್ನಡಾಭಿಮಾನಿ ಬಂದುಗಳೆಲ್ಲರೂ ಬಹಳ ಸಂತೋಷದಿಂದ ಪರಸ್ಪರ ಸಂಕ್ರಾಂತಿಯ ಶುಭಾಶಯವನ್ನು ಕೋರುತ್ತಾ ಉತ್ಸಾಹದಿಂದ ಆಗಮಿಸುತ್ತಿದ್ದರು. ಪ್ರಾಂಗಣದೊಳಗೆ ಪ್ರವೇಶಿಸುತ್ತಿದ್ದಂತೆಯೇ ಬೃಂದಾವನ ಕನ್ನಡ ಕೂಟದ ಆಡಳಿತ ಮಂಡಳಿಯ ಸದಸ್ಯರು ಅತಿಥಿಗಳನ್ನು ಎಳ್ಳು-ಬೆಲ್ಲ ಕೊಟ್ಟು ಆದರದಿಂದ ಬರಮಾಡಿಕೊಳ್ಳುತ್ತಿದ್ದರು.

ಎಂದಿನಂತೆ ಬೃಂದಾವನ ಕನ್ನಡ ಶಾಲೆಯ ಮಕ್ಕಳು ಹುಮ್ಮಸಿನಿಂದ ಸಂಕೇತ ಗೀತೆಯನ್ನು ಹಾಡಿ ಕನ್ನಡಾಂಬೆಗೆ ನಮನಗೈದು ನಂತರ ಭಾರತ ಹಾಗೂ ಅಮೇರಿಕಾ ದೇಶದ ರಾಷ್ಟ್ರಗೀತೆಗಳನ್ನು ಹಾಡಿದಾಗ ಸಭಿಕರೆಲ್ಲರೂ ಎದ್ದು ನಿಂತು ಗೌರವ ಸಲ್ಲಿಸಿ ದೇಶಭಕ್ತಿ ಮೆರೆದರು.

ಕನ್ನಡಕೂಟದ ಕಾರ್ಯಕ್ರಮಗಳಿಗೆ ಪ್ರಾಯೋಜಕರೇ ಆಧಾರ ಸ್ತಂಭಗಳು..ಅಂದಿನ ಕಾರ್ಯಕ್ರಮವನ್ನು ಪ್ರಾಯೋಜಿಸಿದಂತಹ ನ್ಯೂಯಾರ್ಕ್ ಲೈಫ್ ಇನ್ಸುರೆನ್ಸ್ ಮತ್ತು ಮೈ ಟ್ಯಾಕ್ಸ್ ಫೈಲರ್ ಸಂಸ್ಥೆಯ ಪ್ರತಿನಿಧಿಗಳು ವೇದಿಕೆಗೆ ಬಂದು ತಮ್ಮ ಸಂಸ್ಥೆಯಿಂದ ಸಮಾಜಕ್ಕೆ ಆಗಬಹುದಾದಂಹ

ಪ್ರಯೋಜನಗಳ ಬಗ್ಗೆ ತಿಳಿಸಿದರು. ಹೀಗೆ ಪೂರ್ಣಗೊಂಡ ಸಭಾಕಾರ್ಯಕ್ರಮದ ಬಳಿಕ ಬೃಂದಾವನ ಕನ್ನಡ ಕೂಟದ ಪ್ರತಿಭಾನ್ವಿತ ಬಾಲಕ ಆದಿತ್ಯ ಕಟ್ಟಿಮನಿ ತನ್ನ ಮಧುರವಾದ ಭಾವಗೀತೆಯೊಂದಿಗೆ ಸಭಿಕರೆಲ್ಲರೂ ಎದುರು ನೋಡುತ್ತಿದ್ದಂತಹ ಮನೋರಂಜನಾ ಕಾರ್ಯಕ್ರಮಕ್ಕೆ ನಾಂದಿ ಹಾಡಿ ಎಲ್ಲರಿಂದಲೂ ಚಪ್ಪಾಳೆ ಗಿಟ್ಟಿಸಿಕೊಂಡನು. ತದನಂತರ ಕಾರ್ಯಕ್ರಮದ ನಿರೂಪಕಿಯಾದ ಶ್ರೀಮತಿ ಶ್ರೀವಿದ್ಯಾ ಪ್ರಶಾಂತ್ ರವರು ಅಂದಿನ ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಧ್ವನಿ ಗಾರುಡತಿ ಶ್ರೀಮತಿ ಇಂದುಶ್ರೀ ರವೀಂದ್ರ ಮತ್ತು ಅವರ ಗೊಂಬೆ ಬಳಗವನ್ನು ವೇದಿಕೆಗೆ ಸ್ವಾಗತಿಸಿ ಕಿರುಪರಿಚಯವನ್ನಿತ್ತರು.

ಬೆಂಗಳೂರಿನಲ್ಲಿ ಹುಟ್ಟಿ ಬೆಳೆದ ಇಂದುಶ್ರೀ ಯವರು ಬಾಲ್ಯದಲ್ಲಿ ಎರಡನೇ ತರಗತಿಯಲ್ಲಿ ಇದ್ದಾಗ ತಮ್ಮ ಮನೆಗೆ ಬಂದಿದ್ದ ಕೇಶವ್ ಜಾದೂಗಾರ್ ರವರು ತೋರಿಸಿದ ಜಾದೂವಿನಿಂದ ಪ್ರಭಾವಿತರಾಗಿ ಮುಂದೆ ಅದರಲ್ಲೇ ಆಸಕ್ತಿ ಬೆಳೆಸಿಕೊಂಡರು. ಸಣ್ಣ ಅವಧಿಯಲ್ಲೇ ಸೃಜನಾತ್ಮಕ ಪ್ರೇಕ್ಷಕರ ಮನ ಸೆಳೆಯುವಂತೆ ಕಲೆಯನ್ನು ರೂಢಿಸಿಕೊಂಡ ಇವರು"ಡಿಂಕು" ಗೊಂಬೆಯಾಟದಿಂದ, ಪುಟಾಣಿಗಳಿಂದ ಹಿಡಿದು-ವಯೋವೃದ್ಧರ ತನಕ ಎಲ್ಲರ ಮನಗೆದ್ದಿದ್ದಾರೆ.

"ಧ್ವನಿ ಮಾಯೆಯ" ಕಲಾವಿದೆಯಾದ ಇವರ ಈ ಅಪೂರ್ವ ಸಾಧನೆಗೆ ಭಾರತದ ರಾಷ್ಟ್ರಪತಿಗಳು, "ಭಾರತದ ಪ್ರಥಮ ಮಹಿಳಾ ಕಲಾವಿದೆ" ಎಂದು ಪ್ರಶಸ್ತಿ ನೀಡಿ ಗೌರವಿಸಿದರು. ಅಷ್ಟೇ ಅಲ್ಲದೆ ೫ ಬಾರಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್ ಮತ್ತು ಒಂದು ಬಾರಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ನಲ್ಲೂ ದಾಖಲಾಗಿರುವ ಇಂದುಶ್ರೀ, ಸೋನಿ ಟಿ.ವಿ, ಕಲರ್ಸ್, ನ್ಯೂಸೆಕ್ಸ್, ಎನ್ ಡಿ ಟಿವಿ ಪ್ರಯಿಮ್ ಹೀಗೆ ಹಲವಾರು ಟಿ ವಿ ವಾಹಿನಿಗಳಲ್ಲಿ ಸುಮಾರು ೩೫೦ ಕ್ಕೂ ಹೆಚ್ಚು ಧ್ವನಿ ಮಾಯೆಯ ಪ್ರದರ್ಶನವನ್ನು ನೀಡಿ ಅಪಾರ ವೀಕ್ಷಕ ವರ್ಗವನ್ನು ಹೊಂದಿದ್ದಾರೆ.




ಕೇವಲ ಒಂದು ಗೊಂಬೆಯೊಂದಿಗೆ ಧ್ವನಿಮಾಯೆ ಆರಂಭಿಸಿ ಈಗ ಏಕಕಾಲಕ್ಕೆ ಮೂರು ಗೊಂಬೆಗಳ ಧ್ವನಿಯನ್ನು ಅನುಕರಿಸುವ ಕುಶಲತೆ ಇಂದುಶ್ರೀಯವರದು. ತಮ್ಮ ಅಜ್ಜಿ-ತಾತರ ಗೊಂಬೆ ಬಳಗದೊಂದಿಗೆ ಹಾಸ್ಯ ಸನ್ನಿವೇಷಗಳನ್ನು ಸೃಷ್ಟಿಸಿ ನೆರೆದಿದ್ದಂತಹ ಸಭಿಕರೆಲ್ಲರಿಗೂ ಭರಪೂರ ಮನೋರಂಜನೆಯನ್ನು ನೀಡಿ ಸಂಕ್ರಾತಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದರು, ಧ್ವನಿಗಾರುಡತಿ-ಇಂದುಶ್ರೀ.

ಹೀಗೆ ಸುಮಾರು ೨ ತಾಸುಗಳ ಕಾಲ ಎಲ್ಲರಿಗೂ ನಗೆಯ ರಸದೌತಣವನ್ನುಣಬಡಿಸಿದ ಇಂದುಶ್ರೀ ಹಾಗೂ ಅವರ ಗೊಂಬೆ ಬಳಗವನ್ನು ಕೊನೆಯದಾಗಿ ಬೃಂದಾವನ ಕನ್ನಡ ಕೂಟ ಸೌರಭ ತಂಡದ ಅಧ್ಯಕ್ಷರಾದ ಮಾನ್ಯ ಸತೀಶ್ ಹೊಸನಗರ ಇವರು ಅಭಿನಂದಿಸಿದರು. ನ್ಯೂಜೆರ್ಸಿ ಕನ್ನಡಿಗರ ಹೆಮ್ಮೆ, ಸರ್.ಎಂ.ವಿಶ್ವೇಶ್ವರಯ್ಯ ಅವರ ಮರಿ ಸೋದರಳಿಯ  ಶ್ರೀ ಮೋಕ್ಷಗುಂಡಂ ಶೇಷಾದ್ರಿಯವರು ಹೂಗುಚ್ಚವನ್ನಿತ್ತು ಇಂದುಶ್ರೀ ರವೀಂದ್ರರವರನ್ನು ಸನ್ಮಾನಿಸಿದರು. ಲಘು ಉಪಹಾರದೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ನಗು ಸಹಜ ಧರ್ಮ-ನಗಿಸುವುದು ಪರಧರ್ಮ-ನಗು ಕೇಳುತಾ ನಗುವುದು ಅತಿಶಯದ ಧರ್ಮ..ಸಂಕ್ರಾತಿಯ ಈ ಸುಸಂದರ್ಭದಲ್ಲಿ ನಗು ಎಲ್ಲರ ಬಾಳಲ್ಲೂ ಹೀಗೆ ಸದಾ ಹಸಿರಾಗಿರಲೆಂದು ಹಾರೈಸುತ್ತೇನೆ.






# ಕ್ರೇಝಿ ಕರೋಕೆ ಗ್ರೂಪ್ (KKG)

*ವಿ. ಪ್ರಸನ್ನ ಕುಮಾರ್*

ಇದೇನಪ್ಪ ಹುಚ್ಚರ ಸಂತೆ ಅಂದುಕೊಂಡ್ರಾ...ಒಂದು ರೀತಿ ಹಾಗೆ ಅಂದುಕೊಳ್ಳಿ. ಹಾಡಿನ ಹುಚ್ಚು... ಹಾಡುಗಳನ್ನು ಹಾಡಲು ಹುಚ್ಚಿರುವ ನ್ಯೂಜೆರ್ಸಿ ಕನ್ನಡ ಹಾಡುಗಾರರ ಗುಂಪು ಅಂದರೆ ಅತಿಶಯೋಕ್ತಿಯಾಗಲಾರದು !!!!

ಸಂಗೀತ ಕಲಿಯದ, ಹಾಡಿನ ಗಂಧವಿರದ ನಾನು, ನನ್ನ ೫೬ ನೇ ವರ್ಷದವರೆಗೂ ಯಾವುದೇ ಸಮಾರಂಭಗಳಲ್ಲೂ ಹಾಡಿರಲೇ ಇಲ್ಲ. ಜೂನ್ ೨೦೧೫ ರಲ್ಲಿ ನಡೆದ ಮೊದಲನೇ ಎಲ್ ಎಫ್ ಟಿ ಎಮ್ ಕಾರ್ಯಕ್ರಮದಲ್ಲಿ ಒಂದು ಹಾಡನ್ನು ಹಾಡಲು ಉತ್ತೇಜನ ಕೊಟ್ಟಿದ್ದು ನಮ್ಮ ಅಮೂಲ್ಯ ಕಟ್ಟೀಮನಿ. ಆ ಕಾರ್ಯಕ್ರಮದಲ್ಲಿ ನಾನು ಒಂದು ಸೋಲೊ(solo) ಹಾಡಿದ ನಂತರ "ಒಂದು ಯುಗಳ ಗೀತೆಯನ್ನು ನನ್ನೊಡನೆ ಹಾಡುತ್ತೀರ" ಅಂತ ಕೇಳಿದವರು ಮೀನಾ ವಸಿಷ್ಠ. ಸ್ವಲ್ಪ ಹಿಂಜರಿಕೆಯಿಂದಲೇ ಅವರೊಡನೆ ದನಿ ಗೂಡಿಸಿದ ಯುಗಳ ಗೀತೆ "ಚೆನ್ನಾಗಿ ಬಂತೆಂದು" ಎಲ್ಲರೂ ಹೇಳಿದಾಗ ಒಂದು ರೀತಿಯ ಅವ್ಯಕ್ತವಾದ ಆನಂದ ನನಗಾಯಿತು. ಹಾಗಾಗಿ ಹಾಡು ಮುಗಿದ ಕೂಡಲೆ, "ನಾನು ಕೂಡ ತಕ್ಕ ಮಟ್ಟಿಗೆ ಹಾಡಬಲ್ಲೆ" ಅನ್ನೋ ಆತ್ಮವಿಶ್ವಾಸ ನನಗೆ ಬಂದಿತು. ಇದೇ ರೀತಿ ಎಷ್ಟೋ ಜನಗಳಿಗೆ ಹಾಡುವ ಆಸೆಯಿದ್ದರೂ ಅವಕಾಶವಿಲ್ಲದಿರಬಹುದೇನೊ ಅನ್ನೊ ಯೋಚನೆ ನನ್ನನ್ನು ಕಾಡಿತು. ಹಾಗಾಗಿ ಆ ಕಾರ್ಯಕ್ರಮ ಮುಗಿದ ಒಂದು ತಿಂಗಳಿಗೆ ನನ್ನ ಹಾಗು ಮೀನಾ ವಸಿಷ್ಠರ ಮನದಲ್ಲಿ ಉಗಮಿಸಿದ ಒಂದು ಯೋಚನೆಯೇ, ಕ್ರೇಝಿ ಕರೋಕೆ ಕ್ಲಬ್. ೨೦೧೫ ರ ನವೆಂಬರ್ ಥ್ಯಾಂಕ್ಸ್ಗಿವಿಂಗ್ ರಜದಲ್ಲಿ ಕ್ರೇಝಿ ಕರೋಕೆ ಗ್ರೂಪಿನ ಮೊದಲ ಕಾರ್ಯಕ್ರಮ ನಡೆದದ್ದು ಮೀನಾ ಹಾಗು ಸುರೇಶ್ ವಸಿಷ್ಠ ಅವರ ಮನೆಯಲ್ಲಿ.

ಸುಮಾರು ನೂರು ಮಂದಿ ನ್ಯೂ ಜೆರ್ಸಿ ಕನ್ನಡಿಗರು ಇರುವ ಈ ಕ್ರೇಝಿ ಗುಂಪಿನ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸುಮರು ೭೦-೮೦ ಹಾಡುಗಳನ್ನು ಹಾಡಲಾಗುವುದು. ಹಾಗಾಗಿ ಕಾರ್ಯಕ್ರಮ ಶನಿವಾರ ಸಂಜೆ ೫ ಕ್ಕೆ ಶುರುವಾದರೆ ಮುಗಿಯುವುದು ಮಧ್ಯರಾತ್ರಿಯೇ ಅಥವಾ ಭಾನುವಾರ ಬೆಳಗಿನ ಜಾವ. ಸುಮಾರು ಮೂರು ತಿಂಗಳಿಗೊಮ್ಮೆ ನಮ್ಮ ಮನೆ "ಸಂತೃಪ್ತಿ" ಯಲ್ಲಿ ನಡೆದುಕೊಂಡು ಬಂದಿರುವ ಈ ಕೆ.ಕೆ.ಜಿ ಕಾರ್ಯಕ್ರಮದಲ್ಲಿ "ಬಾತ್ ರೂಮ್ ಸಿಂಗರ್ಸ್" ಇಂದ ಹಿಡಿದು ಸಂಗೀತ ಗುರುಗಳ ವರೆಗೂ ತಮ್ಮ ಗಾನ ಕಲೆಯನ್ನು ಪ್ರದರ್ಶಿಸುತ್ತಾರೆ. ಈ ಕೆ.ಕೆ.ಜಿ, ಎಲ್ಲಾ ಗಾಯನ ಅಭಿಲಾಷಿಗಳಿಗೂ ಸೃಷ್ಟಿಯಾಗಿರುವ ಒಂದು ಪುಟ್ಟ ವೇದಿಕೆ. ಈವರೆಗೂ ಎಂಟು ಕಾರ್ಯಕ್ರಮಗಳನ್ನು ನಡೆಸಿರುವ ಈ ವೇದಿಕೆಯಲ್ಲಿ ಪುಟ್ಟ ಪುಟ್ಟ ಪ್ರತಿಭೆಗಳು ನಮಗೆ ಅಚ್ಚರಿ ಮೂಡಿಸುವಂತೆ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಒಮ್ಮೆ ಬೆಂಗಳೂರಿಂದ ಬಂದಿದ್ದ ವಿಷ್ಣು ಎಂಬ ಅತ್ಯುತ್ತಮ ಕರೋಕೆ ಸಿಂಗರ್ ಅವರು ಒಂದು ಕರೋಕೆ ಕಮ್ಮಟ (ವರ್ಕ್ ಶಾಪ್) ಕೂಡ ನಡೆಸಿಕೊಟ್ಟರು. ಇದರಿಂದ ಸುಮಾರು ಮಂದಿ ಕೆ ಕೆ ಜಿ ಸದಸ್ಯರು ಹಾಡಿನ "ಟ್ರ್ಯಾಕ್" ಬಳಸಿ ಮುಂಚೆಗಿಂತ ಚೆನ್ನಾಗಿ ಹಾಡುವುದನ್ನು ಕಲಿತರು.

# ಕ್ರೇಜ಼ೆ ಕರೋಕೆ ಗ್ರೂಪ್



ಇದೇ ವರುಷ ಜನವರಿ ೧೮ ರಂದು ನಡೆದ ಎಂಟನೇ ಕೆ. ಕೆ. ಜಿ ಕಾರ್ಯಕ್ರಮದಲ್ಲಿ ಮುಂಚಿನ ಬಾತ್ ರೂಮ್ ಸಿಂಗರ್ಸ್ ಎಲ್ಲರೂ ನುರಿತ ಗಾಯಕರಂತೆ ಹಾಡಿದರೆ, ನುರಿತ ಗಾಯಕರು ಸಂಗೀತದ ರಸದೌತಣವನ್ನೇ ಉಣಬಡಿಸಿದರು. ಪುಟಾಣಿಗಳಾದ ಆದಿತ್ಯ ಕಟ್ಟೀಮನಿ ಉಸಿರು ಕಟ್ಟಿ ಹಾಡಿದ "ಮಹಪ್ರಾಣ ದೀಪಮ್" ಹಾಗು ಅಭಿಜ್ಞ ಭಾರದ್ವಾಜ್ ಕೀ ಬೋರ್ಡ್ ನಲ್ಲಿ ನುಡಿಸಿದ "ಜಬ್ ಕೊಯಿ ಬಾತ್ ಬಿಗಡ್ ಜಾಯೆ" ಎಲ್ಲರ ಗಮನ ಸೆಳೆಯಿತು. ನನ್ನ ಧರ್ಮಪತ್ನಿ ಉಷಾ ಹಾಗು ನ್ಯೂಜೆರ್ಸಿ "ಸಿಂಗಿಂಗ್ ಸ್ಟಾರ್" ಶ್ರೇಯಸ್ ಹಾಡಿದ "ಏನಮ್ಮ ಹುಡುಗಿ" ಎಲ್ಲರಿಗು ಅಪ್ಪಟ ಮನರಂಜನೆ ಒದಗಿಸಿದರೆ ನಮ್ಮ ಮಗಳು ಸ್ನೇಹ ಹಾಗು ಅಳಿಯ ಮೈಕ್ ಹಾಡಿದ "ಬೆಳಗೆದ್ದು ಯಾರ ಮುಖವ ನಾನು ನೋಡಿದೆ" ಕೇಳಿದಾಗ ಮೈಕ್ ನ ಕನ್ನಡ ಉಚ್ಚಾರಣೆ ಹಾಗು ಹಾಡಿದ ವೈಖರಿ ಎಲ್ಲರನ್ನು ಅಚ್ಚರಿ ಗೊಳಿಸಿತು. ರೂಪಶ್ರಿ ಉಮೇಶ್ ಭಟ್ ಹಾಗು ನಾನು ಹಾಡಿದ "ಒಂದೇ ಒಂದು ಆಸೆಯು", ಶ್ರೀವಿದ್ಯಾ ಹಾಗು ಪ್ರಶಾಂತರ "ಚುರಾಕೆ ದಿಲ್ ಮೆರಾ" ಹಿಂದಿ ಯುಗಳ ಗೀತೆ, ಲಕ್ಷ್ಮಿ ಅನಿಲ್ ಅವರ "ದೇಖ ಎಕ್ ಖ್ವಾಬ್ ತೊ ಸಿಲ್ ಸಿಲೆ ಹುಎ", ಸುಷ್ಮಾ ಹಾಗು ಶ್ರೇಯಸ್ ಅವರ "ನೀ ಬಂದು ನಿಂತಾಗ", ಲಕ್ಷ್ಮೀ ಹಾಗು ಅಪ್ರಮೇಯ ಭಟ್ ಅವರ "ಮಧುಬನ್ ಮೆ ಜೊ ಕನ್ಹಯ್ಯ" ಎಲ್ಲರಿಗೂ ಹಿತವೆನಿಸಿದರೆ ಮೀರ ಭಾರ್ಗವ ಅವರ "ಮೇರಾ ನಾಮ್ ಹೈ ಚುನ್ ಚುನ್ ಚುನ್" ಎಲ್ಲ ಹೆಂಗಳೆಯರನ್ನು ಕುಣಿಸಿತು. ಕೊನೆಯಲ್ಲಿ "ಯೆ ಹಸೀನ್ ವಾದಿಯ" ಹಾಡನ್ನ ಕನ್ನಡಕ್ಕೆ ಭಾಷಾಂತರಿಸಿದ ಮೀರ ಭಾರ್ಗವ ನನ್ನೊಡನೆ ಹಾಡಿದ ಯುಗಳ ಗೀತೆ ಎಲ್ಲರ ಮನವನ್ನು ಸೆಳೆಯಿತು. ೭-೭ ಘಂಟೆಗಳ ಇಡೀ ಕಾರ್ಯಕ್ರಮಕ್ಕೆ "ಟೆಕ್ನಿಕಲ್" ಸಹಾಯ ನಮ್ಮ ಸುಪುತ್ರ ಸುಹಾಸನದು. ಕೆ ಕೆ ಜಿ ಶುರುವಾದ ದಿನದಿಂದ ನನ್ನಂತಹ ಹೊಸ ಅನುಭವಿ ಗಾಯಕರಿಗೆ ಮಾರ್ಗದರ್ಶನ ಮಾಡಿ ಚೆನ್ನಾಗಿ ಹಾಡಲು ಕೆಲವು "ಟಿಪ್ಸ್" ಕೊಡುತ್ತಿರುವವರು ನಮ್ಮೆಲ್ಲರ ಸಂಗೀತದ ಗುರುಗಳಾದ ಸಿಂಹಾದ್ರಿ ಸಂತೆಬೆನ್ನೂರ್ ಅವರಿಗೊಂದು ಸಲಾಮ್ !!!

"ಹಾಡು ಬರಲಿ ಬಾರದಿರಲಿ, ನಾನು ನನ್ನ ಖುಶಿಗೆ ಹಾಡುತ್ತೇನೆ" ಎಂಬ ಮನೋಭಾವ ಇರುವ ಎಲ್ಲಾ ನ್ಯೂಜೆರ್ಸಿ ಕನ್ನಡಿಗರಿಗೆ ಹಾಡಲು ಇದೊಂದು ಸೂಕ್ತವಾದ ವೇದಿಕೆ. ಒಳ್ಳೆಯ ಹಾಡುಗಳನ್ನು ಹಾಡಲು, ಹಾಡುಗಳನ್ನು ಆಲಿಸಲು, ಆಲಿಸುತ್ತಾ ಆನಂದಿಸುವ ಸೌಭಾಗ್ಯದ ಜೊತೆಗೆ ಹೊಸ ಜನಗಳ ಸ್ನೇಹ ದೊರಕುವುದು, ಹಳೆಯ ಸ್ನೇಹಿತರು ಇನ್ನಷ್ಟು ಆತ್ಮೀಯರಾಗುವರು ಈ ಕ್ರೇಜ಼ೆ ಕರೋಕೆ ಗುಂಪಿನ ಕಾರ್ಯಕ್ರಮಗಳಲ್ಲಿ!!!







# ನಮ್ಮನಗಲಿದ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಗಳು

*ರಾಘವೇಂದ್ರ ಕುಂದಲಗುರ್ಕಿ*

ಉಡುಪಿಯ ಶ್ರೀ ಕೃಷ್ಣನ ಪರ್ಯಾಯವನ್ನು ಐದು ಭಾರಿ ವಿಜೃಂಭಣೆಯಿಂದ ಮಾಡಿದ, ಪದ್ಮ ವಿಭೂಶಣ ೧೦೦೮ ಶ್ರೀ ಪೇಜಾವರ ಮಠದ ವಿಶ್ವೇಶತೀರ್ಥರು ತಮ್ಮ ೮೯ ವರ್ಷಗಳ ತಪೋಭರಿತ ಜೀವನವನ್ನು ಸಾಧಕನಾಗಿ ಕಳೆದು, ಡಿಸೆಂಬರ್ ೨೭ ರಂದು ಶ್ರೀ ಕೃಷ್ಣನ ಕರೆಗೆ ಓಗೊಟ್ಟು ವೈಕುಂಠದ ದಾರಿ ಹಿಡಿದರು, ಬೆಂಗಳೂರಿನ ಶ್ರೀ ಪೂರ್ಣಪ್ರಜ್ಞಾ ವಿದ್ಯಾಪೀಠದಲ್ಲಿ ಬೃಂದಾವನಸ್ತರಾದರು.

**ಬಾಲ್ಯ**: ಶ್ರೀ ವಿಶ್ವೇಶತೀರ್ಥ ಶ್ರೀಪಾದರು ಉಡುಪಿಯಿಂದ ೧೧೦ ಕಿ.ಮೀ ದೂರದ ಸುಬ್ರಮಣ್ಯದ ಸಮೀಪದ ಹಳ್ಳಿ ರಾಮಕುಂಜ ಎಂಬ ಹಳ್ಳಿಯಲ್ಲಿ ೧೯೩೧ ಎಪ್ರಿಲ್ ೨೭ರಂದು ಜನಿಸಿದರು.

ತಂದೆ ನಾರಾಯಣಾಚಾರ್ಯ, ತಾಯಿ ಕಮಲಮ್ಮ. ಹುಟ್ಟಿದ ಎರಡನೆಯ ಗಂಡುಮಗುವಿಗೆ 'ವೆಂಕಟರಮಣ' ಎಂದು ಹೆಸರಿಟ್ಟರು. ಅಚಾರ್ಯ ಮಧ್ವರು ನಡೆದಾಡಿದ ಪವಿತ್ರ ಸ್ಥಳವಾದ ಈ ರಾಮಕುಂಜದ ಹಳ್ಳಿಯ ಸಂಸ್ಕೃತ ಎಲಿಮೆಂಟರಿ ಶಾಲೆಯಲ್ಲೇ ಪ್ರಾಥಮಿಕ ವಿದ್ಯಾಭ್ಯಾಸ. ಏಳನೆಯ ವರ್ಷದಲ್ಲೇ ಗಾಯತ್ರಿ ಉಪದೇಶ. ವೇದಮಾತೆ ವಟುವಿನ ತುಟಿಯಲ್ಲಿ ನಲಿದಳು. ಉಪನಯನಕ್ಕೂ ಮುಂಚೆ, ಹುಡುಗನಿಗಿನ್ನೂ ಆರು ವರ್ಷ. ಆಟವಾಡುವ ವಯಸ್ಸು. ತಂದೆ - ತಾಯಿ ಮಗನನ್ನು ಉಡುಪಿಗೆ ಕರೆ ತಂದರು. ಆಗ ಪೇಜಾವರ ಮಠದ ಪರ್ಯಾಯವೇ ನಡೆದಿತ್ತು. ವೆಂಕಟರಮಣ ಮಠದ ಸ್ವಾಮೀಜಿ ಕೃಷ್ಣ ಪೂಜೆ ಮಾಡುವುದನ್ನು ಆಸಕ್ತಿಯಿಂದ ಗಮನಿಸಿದ. ಏನೋ ಒಂದು ಅಂತರಂಗದ ಸೆಳೆತ: ತಾನೂ ಹೀಗೆ ಕೃಷ್ಣನನ್ನು ಪೂಜಿಸಬಹುದೆ? ತಂದೆ-ತಾಯಿ ವೆಂಕಟರಮಣನನ್ನು ಸ್ವಾಮಿಗಳ ಭೇಟಿಗೆ ಕರೆದುಕೊಂಡು ಹೋದರು.

ವೆಂಕಟರಮಣ ಭಕ್ತಿಯಿಂದ ಸ್ವಾಮಿಗಳಿಗೆ ನಮಸ್ಕರಿಸಿದ. ಪುಟ್ಟ ಹುಡುಗನ ಮುಗ್ಧ ಮುಖ, ಅಲ್ಲಿ ತುಂಬಿದ ಭಕ್ತಿ ಭಾವ, ನಡೆಯ ಚುರುಕುತನ ಎಲ್ಲ ಗಮನಿಸಿದ ಸ್ವಾಮಿಗಳಿಗೆ ಏನನ್ನಿಸಿತೋ! ಆಕಸ್ಮಿಕವಾಗಿ ಅವರ ಬಾಯಿಂದ ಹೀಗೊಂದು ಮಾತು ಬಂತು. 'ನೀನು ನನ್ನಂತೆ ಸ್ವಾಮಿಯಾಗುತ್ತೀಯಾ?'

ವೆಂಕಟರಮಣ ಉತ್ತರಿಸಿದ: "ಹ್ಞೂ, ಆಗುತ್ತೇನೆ"
ಈ ಆಕಸ್ಮಿಕ ಸಂಭಾಷಣೆಗೆ ಒಳಗಿನಿಂದ ಪ್ರೇರೇಪಿಸಿದ, ಮೇಲೆ ನಿಂತ ದೇವತೆಗಳು 'ತಥಾಽಸ್ತು' ಎಂದರು. ವೆಂಕಟರಾಮ 'ವಿಶ್ವೇಶ ತೀರ್ಥ'ರಾದರು.

ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ಪಂಚಮಿಯಂದು (೩.೧೨.೧೯೩೮) ವೆಂಕಟರಮಣನಿಗೆ ಹಂಪೆಯ ಯಂತ್ರೋದ್ಧಾರ ಮುಖ್ಯಪ್ರಾಣನ ಸನ್ನಿಧಿಯಲ್ಲಿ ದೀಕ್ಷೆ ನಡೆಯಿತು. ರಾಮಕುಂಜದ ಪುಟ್ಟ ಹಳ್ಳಿಯ ಮುಗ್ಧ ಬಾಲಕ, ಇನ್ನೂ ಏಳರ ಬಾಲ್ಯದ ಹಸುಳೆ, ಅಧೋಕ್ಷಜ

ತೀರ್ಥರ ಸಂಸ್ಥಾನದ ಉತ್ತರಾಧಿಕಾರಿಯಾಗಿ, ಪೇಜಾವರ ಮಠದ ಪರಂಪರೆಯ 32ನೆಯ ಯತಿಯಾಗಿ, ಆಚಾರ್ಯ ಮಧ್ವರ ವೇದಾಂತ ಪೀಠವನ್ನೇರಿದ. ವೆಂಕಟರಾಮ 'ವಿಶ್ವೇಶ ತೀರ್ಥ'ರಾದರು.

**ವಿದ್ವತ್ ಪ್ರಕಾಶ**: ೧೯೪೩ರ ಫೆಬ್ರವರಿ ತಿಂಗಳು. ಶ್ರೀವಿದ್ಯಾಮಾನ್ಯ ತೀರ್ಥರು ಭಂಡಾರಕೇರಿಯಲ್ಲಿ ಶ್ರೀ ಮಧ್ವರಾದ್ಧಾಂತ ಸಂವರ್ಧಿನೀ ಸಭೆಯನ್ನು ಸ್ಥಾಪಿಸಿದರು. ವಿದ್ವಾಂಸರ ಮೇಳವೇ ಭಂಡಾರಕೇರಿಗೆ



ಧಾವಿಸಿತು. ಆ ಬಾರಿಯ ಮಧ್ವನವಮಿಯ ವಿದ್ವತ್ಸಭೆಯ ಅಧ್ಯಕ್ಷತೆಯನ್ನು ೧೨ರ ಬಾಲಯತಿ ಶ್ರೀ ವಿಶ್ವೇಶ ತೀರ್ಥರಿಗೆ ಒಪ್ಪಿಸಿದರು. ಈ ವಾಮನಮೂರ್ತಿಯ ವಿದ್ವೆಯ ತ್ರಿವಿಕ್ರಮಾವತಾರವನ್ನು ಅವರು ಅಂದೇ ಗುರುತಿಸಿದ್ದರು.

ನಾಡಿನ ಉದ್ದಗಲದಿಂದ ಹಿರಿಯ ವಿದ್ವಾಂಸರೆಲ್ಲ ಬಂದು ನೆರೆದಿದ್ದ ಆ ವಿದ್ವತ್ ಸಭೆಯಲ್ಲಿ ಪುಟ್ಟಯತಿ ವಿಶ್ವೇಶ ತೀರ್ಥರು ನೀಡಿದ ಚುಟುಕು ಭಾಷಣ ಎಲ್ಲರಿಗೂ ಚುರುಕು ಮುಟ್ಟಿಸಿತು. ಇಡಿಯ ಸಭೆಗೆ ಸಭೆಯೇ ತಲೆದೂಗಿತು. ಜತೆಗೆ ಅವರು ಶಾರ್ದೂಲ ವಿಕ್ರೀಡಿತದಲ್ಲಿ ರಚಿಸಿದ ಪದ್ಯವಂತೂ ಪಂಡಿತ ಮಂಡಳಿಯನ್ನು ಬೆರಗುಗೊಳಿಸಿತು.

ಭಂಡಾರಕೇರಿಯ ಶ್ರೀವಿದ್ಯಾಮಾನ್ಯ ತೀರ್ಥರು , ಮಧ್ವಶಾಸ್ತ್ರದಲ್ಲಿ, ಕಳೆದ ಶತಮಾನದಲ್ಲಿ ಅಂತಿಮ ಧ್ವನಿಯಾದ ಯತಿವರ್ಯರು, ಅವರ ಶಿಷ್ಯರಲ್ಲಿ ಪ್ರಮುಖರಾದ ಶ್ರೀ ವಿಶ್ವೇಶ ತೀರ್ಥರು, ಶ್ರೀ ಬನ್ನಂಜೆ ಗೋವಿಂದಾಚಾರ್ಯರು,ಪುತ್ತಿಗೆ ಶ್ರೀಗಳಾದ ಸುಗುಣೇಂದ್ರ ತೀರ್ಥರು ಪ್ರಮುಖರು, ಗುರುಗಳ ಪ್ರಿಯ ಶಿಷ್ಯರಾದ ಶ್ರೀ ವಿಶ್ವೇಶ ತೀರ್ಥರು, ಮೂರ್ತಿಯಲ್ಲಿ ವಾಮನನಾದರೂ, ಕೀರ್ತಿಯಲ್ಲಿ ತ್ರಿವಿಕ್ರಮರಾದವರು.

ಹಲವಾರು ಬಾರಿ ಶ್ರೀ ಮನ್ನ್ಯಾಯಸುಧ ಗ್ರಂಥದ [Magnum opus of Madhwa shaastra] ಮೇಲೆ ಅನುವಾದ, ತಾತ್ಪರ್ಯ,ಪ್ರವಚನ ಹಾಗು ಲಕ್ಷಾಂತರ ಶಿಷ್ಯವೃಂದವನ್ನು ಸುಧಾ ಪಂಡಿತರನ್ನಾಗಿ ಮಾಡಿದ ಕೀರ್ತೀ ಶ್ರೀ ವಿಶ್ವೇಶತೀರ್ಥರದು. ಹಲವಾರು ಗ್ರಂಥಗಳನ್ನು ಬರೆದು, ವಿದ್ಯಾರ್ಥಿಗಳಿಗೆ ಪೂರ್ಣಪ್ರಜ್ಞ ವಿದ್ಯಾಪೀಠವನ್ನು ಪ್ರಾರಂಭಮಾಡಿದ ಕೀರ್ತಿ ಯತಿವರ್ಯರದು.

ಶ್ರೀ ವಿಶ್ವೇಶತೀರ್ಥರ  ಸಾಮಾಜಿಕ ಕಳಿಕಳಿ, ಸಾಮಾಜಿಕ ಸುಧಾರಣೆ ಅನುಕರಣೀಯ. ದಲಿತರ ಅಸ್ಪ್ರುಶ್ಯತೆಯ ವಿರುದ್ಧ ಹೊರಾಡಿದ ಯತಿವರ್ಯರು, ಮುಸ್ಲಿಮ್ ಬಾಂಧವರಿಗೆ ಉಡುಪಿಯಲ್ಲಿ ಇಫ್ತಾರ್ ಕೂಟವನ್ನು ಏರ್ಪಡಿಸಿದ್ದರು.ತಿರುಪತಿಯ ಬೆಟ್ಟದ ಮೇಲೆ ಕ್ರೈಸ್ತರ ಚರ್ಚುಗಳನ್ನುಕಟ್ಟಲು ಮುಂದಾದಾಗ, ತಮ್ಮ ಉಪವಾಸ ಸತ್ಯಾಗ್ರಾಹದ ಮೂಲಕ ಅದನ್ನು ಹಿಮ್ಮೆಟ್ಟಿದ ಶ್ರೀಗಳು, ಹಿಂದು ಸಮಾಜಕ್ಕೆ ಧಕ್ಕೆಯಾದಾಗ ನೇರವಾಗಿ ಹೊರಾಟಕ್ಕೆ ಇಳಿದು, ಸಮಾಜದ ಸ್ವಾಸ್ಥತೆಯಲ್ಲಿ ಸ್ವಾಮಿಗಳ ಪ್ರಮುಖ ಪಾತ್ರವಿದೆ ಎಂದು ತೋರಿಸಿಕೊಟ್ಟರು.

**ಶ್ರೀ ವಿಶ್ವೇಶ ತೀರ್ಥರ ವಿಶೇಷ ಸಾಧನೆ**: ಶ್ರೀ ವಾದಿರಾಜತೀರ್ಥರ ದಿನಗಳಿಂದ  ಉಡುಪಿಯಲ್ಲಿ ೨ ವರ್ಷಗಳಿಗೊಮ್ಮೆ ಪರ್ಯಾಯ ಮಾಡುವ ಸಂಪ್ರದಾಯ ಉಡುಪಿಯಲ್ಲಿ ಇದೆ. ಅಷ್ಠ ಮಠಗಳಲ್ಲಿ ಹಂಚಿ ಹದಿನಾರು ವರ್ಷಗಳಿಗೊಮ್ಮೆ ಬರುವ ಪರ್ಯಾಯವನ್ನು ೫ ಬಾರಿ ಮಾಡಿದ ಸಾಧನೆ,   ಕಳೆದ ೫೦೦ ವರ್ಷಗಳಲ್ಲಿ  ಕೇವಲ ಶ್ರೀ ವಿಶ್ವೇಶ ತೀರ್ಥರದು.

**ಶ್ರೀರಾಮ ಮಂದಿರದ ಕನಸು** : ಆಯೋಧ್ಯೆಯಲ್ಲಿ ಶ್ರೀರಾಮದೇವರ ಭವ್ಯವಾದ ಮಂದಿರ ಕಟ್ಟುವ ಸಂಕಲ್ಪ ಮಾಡಿ,ಕಟ್ಟಡದ ಶಿಲಾನ್ಯಾಸ ಮಾಡಿ, ರಾಮ ದೇವರ ಪ್ರತಿಮೆಗಳ ಪ್ರತಿಷ್ಠಾಪನೆಯನ್ನು ಮಾಡಿದ ಕೀರ್ತಿ ಶ್ರೀ ವಿಶ್ವೇಶ ತೀರ್ಥರದು.

ಕಳೆದ ಶತಮಾನದಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ ಮಹಾ ಯತಿಗಳಾಗಿ, ಭಾರತ ದೇಶದಲ್ಲಿ ಧಾರ್ಮಿಕ ಜೀವನಕ್ಕೆ ನಂದಾದೀಪ ದಂತಿದ್ದ ಶ್ರೀಗಳು, ಹಿಂದೂ ಸಮಾಜಕ್ಕೆ, ಕರ್ನಾಟಕ ರಾಜ್ಯಕ್ಕೆ, ಲಕ್ಷಾಂತರ ಶಿಷ್ಯವೃಂದಕ್ಕೆ, ವಿಶೇಷವಾಗಿ ಆಚಾರ್ಯ ಮಧ್ವಾಚಾರ್ಯರ ಎಲ್ಲ ಅನುಯಾಯಿಗಳಿಗೆ ತುಂಬಲಾರದ ದು:ಖವನ್ನುಂಟು ಮಾಡಿ ನಮ್ಮನ್ನಗಲಿದ್ದಾರೆ. ಶ್ರೀ ವಿಶ್ವೇಶ ತೀರ್ಥರನ್ನು ನೋಡಿದ, ಅವರ ಅನುಗ್ರಹವನ್ನು ನೇರವಾಗಿ ಪಡೆದ ನಾವೇ ಧನ್ಯರು.



# ಸುಮ್ಮನೆ ಪಲ್ಯ

ಲಕ್ಷ್ಮಿ ಕೊಲಾಲ್



ಒಂದು ಚಳಿಗಾಲದ ವೀಕ್ ಡೇ ಬೆಳಗ್ಗಿನಿಂದ ಸಂಜೆಯ ವರೆಗೆ ಒಂದೇ ಸಮ ಕೆಲಸವಾದ್ದರಿಂದ
ಲಕ್ಷ್ಮಿಗೆ ಬಹಳ ದಣಿವಾಗಿತ್ತು. ಸಾಯಂಕಾಲ ೫ ಘಂಟೆಗೆ ಉಸ್ಸಪ್ಪ ಅಂತಾ ಕುಳಿತು ಯೋಚನೆ ಮಾಡುತ್ತಿದ್ದಂತೆ ಮಗನ ಸ್ವಿಮ್ಮಿಂಗ್ ಕ್ಲಾಸ್ ಬೇರೆ ಇದೆ ಮೆಡಿಕಲ್ ಶಾಪ್ ನಲ್ಲಿ ಮಾತ್ರೆಗಳನ್ನು ಪಿಕ್ ಅಪ್ ಮಾಡಬೇಕು ಎಂದು ಮತ್ತೆ ಕಾರಿನ ಬಳಿ ಧಾವಿಸಿದಳು.

ಮಗನನ್ನು ಈಜಿನ ಶಾಲೆಯಲ್ಲಿ ಬಿಟ್ಟು ಮಾತ್ರೆಗಳನ್ನು ಪಿಕ್ ಅಪ್ ಮಾಡಿ ಬರುವಾಗ ಮನೆಯಲ್ಲಿ ಅಡುಗೆ ಇಲ್ಲವೆಂದು ನೆನೆದು ಪಕ್ಕದಲ್ಲೇ ಇದ್ದ ರೈತರ ಮಾರುಕಟ್ಟೆಗೆ ಹೋಗಿ ದುಂಡಾಗಿ ಚೆನ್ನಾಗಿ ಕಂಡ ಎರಡು ಚೈನೀಸ್ ಬದನೆಕಾಯಿಗಳನ್ನು ಖರೀದಿಸಿ ಮಗನನ್ನು ಕರೆದುಕೊಂಡು ಮನೆಗೆ ಬಂದಳು.

ಅಷ್ಟರಲ್ಲಿ ಆಗಲೇ ಗಡಿಯಾರ ಒಂಬತ್ತು ತೋರಿಸುತ್ತಿತ್ತು. ಅಯ್ಯೋ ಈಗ ಒಂದು ಆನ್ ಕಾಲ್ ಮೀಟಿಂಗ್ ಇದೆ ..ಯಜಮಾನರು ಬರುವ ವೇಳೆ ಬೇರೆ ಎಂದು ತಳಮಳದಿಂದ ಕೈಗೆ ಸಿಕ್ಕ ಒಂದೆರಡು ಈರುಳ್ಳಿಗಳು ಮತ್ತು ಬದನೆಕಾಯನ್ನು ಕತ್ತರಿಸಿ ..ಉಪ್ಪು ಖಾರದಪುಡಿ ಮತ್ತು ಎಣ್ಣೆ ಜೀರಿಗೆ ಎಲ್ಲವನ್ನು ಇನ್ಸ್ಟಂಟ್ ಪಾಟ್ ನಲ್ಲಿ ಇಟ್ಟು ಅರಿಶಿನವನ್ನು ಹಾಕುವಾಗ ಗಡಿಬಿಡಿಯಲ್ಲಿ ಒಂದೆರಡು ಚಮಚ ಹೆಚ್ಚೇ ಹಾಕಿಬಿಟ್ಟಳು.

ಮೀಟಿಂಗ್ ಮುಗಿಯಿತು ಪತಿದೇವರಿಗೆ ಹಸಿವಾದದ್ದರಿಂದ ಚಪಾತಿಯೊಂದಿಗೆ ಪಲ್ಯವನ್ನು ತಿಂದು ಸಹ ಆಗಿತ್ತು. ಅವರಿಂದ ಯಾವುದೇ ರೀತಿಯ ರಿಯಾಕ್ಷನ್ ಬಂದಿರಲಿಲ್ಲ .

ಲಕ್ಷ್ಮಿ ಪಲ್ಯದ ರುಚಿ ನೋಡಿದಾಗ ಅದು ಬದನೆ ಪಲ್ಯಕ್ಕಿಂತ ..ಅರಿಶಿನದ ಪಲ್ಯದಂತಿತ್ತು.

ಮಾರನೇ ದಿನ ಸುಮ್ಮನೆ (ಯಾರಿಗೂ ಹೇಳದೆ) ಆ ಪಲ್ಯಕ್ಕೆ ಇನ್ನಷ್ಟು ಕಾಳು ಮತ್ತು ಹಸಿಮೆಣಸಿನಕಾಯಿಯನ್ನು ಹಾಕಿ ಉದ್ದವಾಗಿಸಿ ಮಾಡಿದ ಪಲ್ಯಕ್ಕೆ..."ಸುಮ್ಮನೆ ಬದನೇಕಾಯಿ ಪಲ್ಯ" ಎಂದು ನಾಮಕರಣ ಮಾಡಿ ಸ್ನೇಹಿತರೊಂದಿಗೆ ಈ ಕಿರುಕಥೆಯನ್ನು ಹಂಚಿಕೊಂಡಳು.



# ನಿನಗಾಗಿ

ಶ್ರೀವತ್ಸ ಕುಲಕರ್ಣಿ

## ಓ ನನ್ನ ಪ್ರೇಯಸಿಯೇ!!

ಪ್ರೇಯಸಿಯೇ, ನಾ ಕಳೆದು ಹೋದೆ ನಿನ್ನ ಪ್ರೀತಿಯೊಳು,
ನಿನ್ನಲ್ಲೇ, ಬೆರೆತು ಹೋದೆ ಪ್ರತೀ ಕ್ಷಣದಲ್ಲೂ,

ಈ ನಿನ್ನ ಪ್ರೀತಿಗೆ, ಬೇರೆ ಲೇಶವೇತಕೆ,
ನಮ್ಮೀ ಯಾತ್ರೆಗೆ, ನೀ ದೀಪ, ಹರಿದಾರಿ ನಾನು,
ಸ್ಪಂದನ ಬೇಕಿದೆ, ತುಡಿಯುವಾ ಭಾವಕೆ,
ಸ್ಪಂದಿಸು ಈಗಲೇ, ಕೊಡು ಮುದ್ದ ಮುತ್ತಾದರೂನು,

ತಲೆ ಗಿರಾ ಗಿರಾ ಗಿರಾ, ತಲೆ ಗಿರಾ ಗಿರಾ ಗಿರಾ,
ತಲೆ ಗಿರಾ ಗಿರಾ ಗಿರಾ, ತಲೆ ಗಿರಾ ಗಿರಾ ಗಿರಾ!!

ಮಂದಸ್ಮಿತ, ನಿನ್ನೀ ಮೊಗ ಮೊದಲಿಂದಲೇ...
ಕಂಡಾಕ್ಷಣ, ಮರೆಯಾಯಿತು ನನ್ನಾ ಸೆಲೆ...
ಮಾತೆಲ್ಲವೂ, ಮರೆತೋಯಿತು ನಿನ ಕಂಡಾಗಲೇ...
ಮೂಕಸ್ಮಿತ, ಆಗೋದೆನಾ ನಿನ್ನಿಂದಲೇ...

ತಲೆ ಗಿರಾ ಗಿರಾ ಗಿರಾ, ತಲೆ ಗಿರಾ ಗಿರಾ ಗಿರಾ,
ತಲೆ ಗಿರಾ ಗಿರಾ ಗಿರಾ, ತಲೆ ಗಿರಾ ಗಿರಾ ಗಿರಾ!!!

## ಅಂತರ್ಗತ!!!

ಮುಂಜಾವ ಸವಿ ಮಂಜಿನಲಿ,
ಬೆಚ್ಚಗಿನ ನಿನ ಮೈ ಶಾಖದಲಿ,
ಮೈ ಮರೆತು ಜಾರಿದೆ,
ಆ ನಿನ್ನ ಮುದ್ದಿನ ಮನದಲಿ...

ಆ ನಿನ್ನ ಮನವ,
ಕಂಡೊಡನೆ ಅದರ ಚೆಲುವ,
ಮುತ್ತಿನಾ ಹನಿಯೊಂದು,
ಸೇರಿ ಮುದ್ದಾಯಿತು, ನಿನ್ನ ಮಧುರ ಭಾವ...

ನಿನ್ನೀ ಭಾವ,
ಮರೆಸುವುದು ಎಲ್ಲ ಕಹಿಗಳ ನೋವ,
ಸೆಳೆದೊಯ್ಯುದು,
ಬೇರೊಂದು ಲೋಕಕೆ, ಹಾರಿಸುತ ಹೊಸ ಪತಾಕೆಯ ಜೀವ...

ನನ ಕಣ್ಣಾಲಿಗಳಿಗೆ ನೀನೆ ಜೀವ,
ಕ್ಷಣಕಾಲ ಕಾಣದಾದರೂ ಹೇಳ-ತೀರದು ಅದರ ನೋವ,
ನೀ-ನನ್ನಲಿ, ನಾ-ನಿನ್ನಲಿ,
ಅಂತರ್ಗತರಾಗಿ ಸವೆಸುವುದೇ ನಮ್ಮೀ ಸಂಸಾರದ ಭಾವ!!!



## ಅನ್ವಿತಾ ಪ್ರಶಾಂತ್







## ಸಾರ್ಥಕ್ ರಾವ್





## ಶ್ರೇಯಾ ರಾಘವೇಂದ್ರ





## ಉಮಾ ರಮೇಶ್








# ಗೋಧಿ ರವೆ ಉಪ್ಪಿಟ್ಟು

*ಉಮಾ ರಮೇಶ್*





**ಪದಾರ್ಥಗಳು**: -
ಹುರಿದ ಒಡೆದ ಗೋಧಿ - 2 ಕಪ್
ವಿವಿಧ ತರಕಾರಿಗಳ ಮಿಶ್ರಣ - 1 ಕಪ್
ನೀರು - 5 ಕಪ್
ಉಪ್ಪು - 5 tsp (ರುಚಿಕೆ ತಕ್ಕಷ್ಟು)
ನಿಂಬೆ - 2 ನಿಂಬೆಹಣ್ಣಿನ ರಸ

**ಒಗ್ಗರಣೆ:**
ಉದ್ದಿನ ಬೇಳೆ - 3 ಟೀಸ್ಪೂನ್
ಸಾಸಿವೆ - 3tsp
ಕಡಲೆಕಾಯಿ - 1/2 ಕಪ್
ಹಸಿ ಮೆಣಸಿನಕಾಯಿ - 6
ಶುಂಠಿ - 2 ಇಂಚು
ಕರಿಬೇವಿನ ಎಲೆಗಳು - 2 ಚಿಗುರು
ಹಿಂಗು - 1tsp
ಎಣ್ಣೆ / ತುಪ್ಪ - 1/4 ಕಪ್.

**ಪಾತ್ರೆ** : - ಪ್ರೆಶರ್ ಕುಕ್ಕರ್ ಮತ್ತು ದೊಡ್ಡ ಚಮಚ

**ವಿಧಾನ**: -

ಪ್ರೆಶರ್ ಕುಕ್ಕರ್ ಅನ್ನು ಬಿಸಿ ಮಾಡಿ. ಎಣ್ಣೆ ಸೇರಿಸಿ. ಬಿಸಿಯಾದ ನಂತರ ಉದ್ದು , ಸಾಸಿವೆ ಮತ್ತು ಕಡಲೆಕಾಯಿ ಸೇರಿಸಿ. ಉದ್ದಿನ ಬಣ್ಣವನ್ನು ಚಿನ್ನದ ಕಂದು ಬಣ್ಣಕ್ಕೆ ಬದಲಾಗುವ ವರೆಗೂ ಹುರಿಯಿರಿ . ನಂತರ ಮೆಣಸಿನಕಾಯಿ, ಶುಂಠಿ, ಕರಿಬೇವಿನ ಎಲೆ ಮತ್ತು ಹಿಂಗು ಸೇರಿಸಿ.

ಟೆಂಪರಿಂಗ್ ಸಿದ್ಧವಾದ ನಂತರ ತರಕಾರಿಗಳು, ಹುರಿದ ಬಿರುಕು ಬಿಟ್ಟ ಗೋಧಿ, ನೀರು ಮತ್ತು ಉಪ್ಪು ಸೇರಿಸಿ. ಪ್ರೆಶರ್ ಕುಕ್ಕರ್ ಮುಚ್ಚಳವನ್ನು ಮುಚ್ಚಿ ಮತ್ತು ಒಂದು ಶಿಳ್ಳೆ ಬರುವವರೆಗೂ ಕಾಯಿರಿ. ಶಿಳ್ಳೆ ನಂತರ ಒಲೆಯನ್ನು ಆರಿಸಿ, ಕುಕ್ಕರ್ ನಿಂದ ಪ್ರೆಶರ್ ಇಳಿಯುವವರೆಗೂ ಕಾಯಿರಿ.

ಕುಕ್ಕರ್ ತೆರೆಯಿರಿ ಮತ್ತು ನಿಂಬೆಹಣ್ಣಿನ ರಸವನ್ನು ಸೇರಿಸಿ ಮತ್ತು ಚೆನ್ನಾಗಿ ಮಿಶ್ರಣ ಮಾಡಿ. ಉಪ್ಪಿಟ್ಟು ತಿನ್ನಲು ಸಿದ್ಧವಾಗಿದೆ. ನೀವು ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ ಬಡಿಸಬಹುದು.



# ಮೊಳಕೆ

*ನರೇಂದ್ರ ಬಿ ಕೆ*

ಬಾಲ್ಯದಲ್ಲಿಯೇ ಮನೆಯಲ್ಲಿ ವಿಟಮಿನ್ ಎ ಅಂಶವಿರುವ ಆಹಾರ ಪದಾರ್ಥಗಳ ಬಳಕೆಗೆ ಒತ್ತು ಕೊಟ್ಟಿದ್ದರು, ಚಿಕ್ಕವರಿದ್ದಾಗ ಮನೆಯಲ್ಲಿ ಮೊಳಕೆ ಕಾಳುಗಳ ಬಳಕೆ ಯಥೇಚ್ಛವಾಗಿ ಇರುತ್ತಿತ್ತು, ನಮ್ಮ ತಾಯಿ ಬಹಳವಾಗಿ ಹೆಸರುಕಾಳಿನ ಮೊಳಕೆ ಮತ್ತು ಹುರುಳಿಕಾಳಿನ ಮೊಳಕೆಗಳನ್ನು ಮಾಡುತ್ತಿದ್ದರು. ಈ ಲೇಖನದಲ್ಲಿ ನಾನು ಮೊಳಕೆ ಬರಿಸುವುದರ ಬಗ್ಗೆ ಮಾತ್ರ ಬರೆಯಬೇಕಿರುವುದರಿಂದ ನೆನಪಿನ ಅಂಗಳದಿಂದ ಇಂದಿಗೆ ಬರುತ್ತೇನೆ. ಬೆಂದಕಾಳೂರಿನಲ್ಲಿ ಮೊಳಕೆ ಮಾಡುವುದು ತಿನ್ನುವುದೂ ಎಲ್ಲವೂ ಸರಿಯಿತ್ತು ಆದರೆ ಇಲ್ಲಿಗೆ ಬಂದ ನಂತರ ನ್ಯೂಜರ್ಸಿಯ ಹವಾಮಾನ ವೈಪರೀತ್ಯಗಳನ್ನು ಕಂಡು ಕೇಳರಿಯದ ನಾವು ನಮ್ಮ ಮೊದಲ ಮೊಳಕೆ ಬರಿಸುವ ಪ್ರಯತ್ನದಲ್ಲಿ ವಿಫಲರಾದೆವು. ನಮ್ಮ ತಾಂತ್ರಿಕತೆ ಮತ್ತು ಸಲಕರಣೆಗಳನ್ನು ಹೊಸದಾಗಿ ಆವಿಷ್ಕರಿಸುವ ಅವಶ್ಯಕತೆ ಬಂದೊದಗಿತು.



ನಮ್ಮ ಮೊಳಕೆಯ ಬಗೆಗಿನ ಸಾಮಾನ್ಯ ಜ್ಞಾನ ಕಡಿಮೆ ಎಂಬುದು ಅರಿವಾಗಿದ್ದು ಆವಾಗಲೇ, ಕೂಡಲೇ ಮೊಳಕೆ ಬರಿಸುವುದು ಹೇಗೆ ಅದರ ತಾಂತ್ರಿಕ ಅಂಶಗಳು ಏನು ಎನ್ನುವುದರ ಬಗ್ಗೆ ನಾವು ಕುತೂಹಲಭರಿತರಾಗಿ ಅರಿಯಲು ಪ್ರಯತ್ನಿಸಿದೆವು.

ಮೊಳಕೆ ಬರಲು ಮುಖ್ಯವಾಗಿ ಮೂರು ಅಂಶಗಳು ಕಾರಣವಾಗಿರುತ್ತವೆ, ಮೊದಲನೆಯದಾಗಿ ಕಾಳುಗಳು ಮೊಳಕೆ ಬರಲು ಅವಶ್ಯಕವಾಗುವ ನೆನೆದ ಸ್ಥಿತಿಯನ್ನು ತಲುಪುವುದು, ಎರಡನೆಯದಾಗಿ ಚೆನ್ನಾಗಿ ನೆನೆದ ಕಾಳುಗಳಿಗೆ ಅವಶ್ಯಕವಾದ ಕಾವು ಸಿಗುವುದು ಮತ್ತು ಕೊನೆಯದಾಗಿ ಮೊಳಕೆ ಬಂದ ನಂತರ ಅದಕ್ಕೆ ಬೇಕಾಗುವ ತೇವಾಂಶ ಸಿಗುವುದು.

ಮೊದಲನೆಯದಾಗಿ ಕಾಳುಗಳು ಪೂರ್ಣವಾಗಿ ನೆನೆಯುವವರೆಗೂ ನೆನೆಸುವುದು, ಕೆಲವೊಮ್ಮೆ ಎಲ್ಲಾ ಕಾಳುಗಳು ಒಂದು ರಾತ್ರಿಯಲ್ಲಿ ನೆನೆಯುವುದಿಲ್ಲ, 24 ಗಂಟೆ ನೆನೆಸುವುದು ಸರಿಯಾದ ಕ್ರಮ ಎನ್ನುವುದು ನನ್ನ ಈಗಿನ ಅಭಿಪ್ರಾಯ

ಎರಡನೆಯದಾಗಿ ಸರಿಯಾಗಿ ನೆನೆದ ಕಾಳುಗಳನ್ನು ಬಿಸಿ ನೀರಿನಲ್ಲಿ ತೊಳೆದು ಬಟ್ಟೆಯಲ್ಲಿ ಕಟ್ಟುವುದು ಅಥವಾ ಪೇಪರ್ ಟವಲ್ ಸುತ್ತಬಹುದು, ತದನಂತರ ಬಿಗಿಯಾಗಿ ಸುತ್ತಿದ ಆ ಬಟ್ಟೆಯ ಗಂಟನ್ನು ಸ್ವಲ್ಪ ಗಾಳಿಯಾಡುವ ಪಾತ್ರೆಯಲ್ಲಿ ಹಾಕಿಡಬೇಕು, ಪಾತ್ರೆಯನ್ನು ಯಾವುದಾದರೂ ಕತ್ತಲೆಯ ಮೂಲೆಯಲ್ಲಿ ಇಡುವುದು ಉತ್ತಮ. ಕೆಲವೊಮ್ಮೆ ಕಾಳಿನ ಗಂಟಿನ ಪಾತ್ರೆಯನ್ನು ನಿಮ್ಮಲ್ಲಿ ಇರಬಹುದಾದ ಯಾವುದಾದರೂ OTG ಒಳಗಡೆ ಇಟ್ಟರೂ ಆಯಿತು.

ಕಾಳುಗಳನ್ನು ಬಟ್ಟೆಯಲ್ಲಿ ಕಟ್ಟುವಾಗ ಅವುಗಳನ್ನು ತೀರಾ ಒಣಗಿಸುವ ಅವಶ್ಯಕತೆ ಇರುವುದಿಲ್ಲ, ಆದರೆ ಕಾಳುಗಳನ್ನು ಕಟ್ಟಿ ಇಟ್ಟ ಪಾತ್ರೆಯಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಿ, ಗಾಳಿ ಹೆಚ್ಚಾಗಿ ಆಡಿದರೆ ಮೊಳಕೆ ಬರಲು ಬೇಕಾದ ಉಷ್ಣತೆಯನ್ನು ತಲುಪಲಾಗುವುದಿಲ್ಲ, ಹಾಗಾಗಿ ಅತಿಯಾಗಿ ಗಾಳಿ ಆಡದ ಸ್ಥಳದಲ್ಲಿ ಇವುಗಳನ್ನು ಇಡಬೇಕು. ಮೊಳಕೆಗೆ ಇಟ್ಟ ಪಾತ್ರೆಯ ಸ್ಥಳವನ್ನು ತುಂಬಾ ಅದಲು ಬದಲು ಮಾಡಬೇಡಿ. 48 ಗಂಟೆಗಳ ನಂತರ ಯಾವುದೇ ಕಾಳು ಆದರೂ ಕೂಡ ಮೊಳಕೆ ಬಂದು ಸಿದ್ಧವಾಗಿರುತ್ತದೆ. ಮೊದಲ ದಿನದ ಸಣ್ಣ ಮೊಳಕೆ ತುಂಬಾ ಸಿಹಿಯಾಗಿದ್ದು ದಿನಕಳೆದಂತೆ, ಮೊಳಕೆ ಉದ್ದವಾದಂತೆ ಸಿಹಿ ಅಂಶ ಕಡಿಮೆ ಆಗುತ್ತದೆ.

ಎಲ್ಲ ಮಾಡಿಯೂ ಕೆಲವೊಮ್ಮೆ ಒಳ್ಳೆಯ ಮೊಳಕೆ ಬರುವುದಿಲ್ಲ , ಕಾರಣಗಳು ಹಲವಿರಬಹುದು, ಕಾಳುಗಳು ನೆನೆಯದೆ ಇರಬಹುದು, ಮೊಳಕೆ ಬರಲು ಬೇಕಾಗುವ ಉಷ್ಣತೆಯನ್ನು ನಾವು ಸೃಷ್ಟಿ ಮಾಡಿಲ್ಲದೆ ಇರಬಹುದು, ಮೊಳಕೆಗಳು ಬೆಳೆಯಲು ಬೇಕಾದ ತೇವಾಂಶ ದೊರೆಯದೆ ಇರಬಹುದು, ಗಾಳಿ ಹೆಚ್ಚಾಗಿರಬಹುದು, ಗಾಳಿ ಸಿಗದೇ ಇರಬಹುದು, ನಾನು ಅರಿತುಕೊಂಡಿರುವ ಒಂದು ಪಾಠವೆಂದರೆ ಮರಳಿ ಯತ್ನವ ಮಾಡು. ಬಟ್ಟೆಯ ಬದಲಾಗಿ ನಾನು paper towel ಅನ್ನು ಕೂಡ ಬಳಸಿರುತ್ತೇನೆ, ಪಾತ್ರೆಯ ಬದಲಾಗಿ ಪ್ಲಾಸ್ಟಿಕ್ ಡಬ್ಬ ಗಳಿಗೆ ತೂತ ಮಾಡಿ ಅದನ್ನು ಕೂಡ ಬಳಸಿರುತ್ತೇನೆ, ಕೆಲವೊಮ್ಮೆ ಕಾಳುಗಳನ್ನು ಬಿಸಿನೀರಿನಲ್ಲಿ ನೆನೆಸಿ ಬಳಸಿರುತ್ತೇನೆ.

ಇಷ್ಟರ ಮೇಲೂ ನಿಮಲ್ಲಿ ಮೊಳಕೆ ಮೂಡದಿದ್ದರೆ ನಮ್ಮ whatsapp Group -Indian vegetarian diet NJ ಸೇರಿಕೊಳ್ಳಿ ಮತ್ತು ಆಹಾರ ತಜ್ಞರೊಂದಿಗೆ ಮಾತನಾಡಿ ಮತ್ತು ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಿ





# ಐಸ್ಲ್ಯಾಂಡ್

ರೋನಕ್ ಹುನಶೀಮರದ

ಐಸ್ಲ್ಯಾಂಡ್ ಖಂಡಿತವಾಗಿಯೂ ಯುರೋಪಿನಲ್ಲಿ ಭೇಟಿ ನೀಡುವ ಅತ್ಯುತ್ತಮ ಸುಂದರವಾದ ಸ್ಥಳಗಳಲ್ಲಿ ಒಂದಾಗಿದೆ. ಅದರ ಭೂಪ್ರದೇಶವು ಮಾನವಕುಲದ ಎಲ್ಲಾ ಯಂತ್ರೋಪಕರಣಗಳಿಂದ ಅಸ್ಪೃಶ್ಯವಾಗಿದೆ. ಅದರ ನಗರಗಳಲ್ಲಿ ಜನಸಂಖ್ಯೆ ಕಡಿಮೆ ಇರುವದು ಮತ್ತು ಅದರ ಸುಂದರವಾದ ವಿಶಿಷ್ಟ ಭೂಪ್ರದೇಶದ ವೀಕ್ಷಣೆಗಳು ನಂಬಲಾಗದ ಫೋಟೋಗ್ರಾಫಿಗೆ ಸೂಕ್ತವಾಗಿವೆ.

ಐಸ್ಲ್ಯಾಂಡ್ನಲ್ಲಿ ನವೀಕರಿಸಬಹುದಾದ ಶಕ್ತಿ (renewable energy) ಸುಮಾರು 100% ರಷ್ಟು ಅಥವಾ ಕನಿಷ್ಠ 90% ರಷ್ಟು ಭೂಶಾಖದ ಶಕ್ತಿಯಿಂದ ಬರುತ್ತದೆ. ಇಂತಹ ಅನೇಕ ಸ್ಥಳಗಳು ಜಗತ್ತಿನಲ್ಲಿ ಇಲ್ಲ. ಈ ಎಲ್ಲಾ ವಿವರಗಳು ಎಷ್ಟೇ ವಿಚಿತ್ರವಾದರೂ ಐಸ್‌ಲ್ಯಾಂಡ್‌ಗೆ ಭೇಟಿ ನೀಡಲು ಅನನ್ಯ ಮತ್ತು ಉತ್ತೇಜಕವಾದ ವಿಷಯಗಳು ಆಗಿರುತ್ತವೆ.

ಐಸ್ಲ್ಯಾಂಡ್ನಲ್ಲಿನ ಹವಾಮಾನವು ತುಂಬಾ ಅನಿರೀಕ್ಷಿತವಾಗಿದೆ. ವಾಸ್ತವವಾಗಿ, ಕೇವಲ 10-15 ನಿಮಿಷಗಳಲ್ಲಿ, ಅದು ಶಾಂತ ಮತ್ತು ತಂಗಾಳಿಯಿಂದ ಸಂಪೂರ್ಣವಾಗಿ ಅಸ್ತವ್ಯಸ್ತವಾಗಿರುವ ಗಾಳಿಗಳಿಂದ ನಿಮ್ಮನ್ನು ಕೆಳಕ್ಕೆ ತಳ್ಳುವಷ್ಟು ಪ್ರಬಲವಾಗಿರುತ್ತದೆ. ನೀವು ಸಿದ್ಧವಾಗಿಲ್ಲದಿದ್ದರೆ ಬಹಳ ಅಪಾಯಕಾರಿ ಅನುಭವಕ್ಕೆ ಕಾರಣವಾಗಬಹುದು. ಇದಕ್ಕಾಗಿಯೇ ಐಸ್ಲ್ಯಾಂಡ್ಗೆ ಪ್ರಯಾಣಿಸುವಾಗ ನೀವು ಯಾವಾಗಲೂ ರೇನ್ ಕೋಟ್, ದಪ್ಪ ಕೋಟುಗಳು, ಉತ್ತಮವಾದ ಕೈಗವಸುಗಳು, ಸಾಕ್ಸ್ ಮತ್ತು ಟೋಪಿಗಳನ್ನು ತರಬೇಕು. ಹವಾಮಾನವು ಉತ್ತಮವಾಗಿದ್ದರೂ ಸಹ ನೀವು ಅದನ್ನು ತರಬೇಕು ಏಕೆಂದರೆ ನೀವು ಅಗತ್ಯವಿದ್ದಾಗ ಅದನ್ನು ಬಳಸಬಹುದು ಆದರೆ ನಿಮ್ಮ ಬಳಿ ಇಲ್ಲದಿದ್ದರೆ ನೀವು ಅದನ್ನು ಬಳಸಲಾಗುವುದಿಲ್ಲ.

ಐಸ್ಲ್ಯಾಂಡ್ ಸುತ್ತಲೂ ಸಾಕಷ್ಟು ಹಿಮವಿದೆ ಆದರೆ ಗ್ರೀನ್‌ಲ್ಯಾಂಡ್ ಐಸ್ಲ್ಯಾಂಡ್‌ಗಿಂತ ತಂಪಾಗಿರುತ್ತದೆ ಮತ್ತು ಅಲ್ಲಿ ಹೆಚ್ಚು ಹಿಮ ಇದೆ, ಅದರ ಹೆಸರು ಮಾತ್ರ ಗ್ರೀನ್‌ಲ್ಯಾಂಡ್. ಆದರೆ ಹಿಮ ಐಸ್ಲ್ಯಾಂಡ್‌ನಲ್ಲಿ ಘನೀಕರಿಸುತ್ತಿದೆ. ಅದನ್ನು ನಿರ್ವಹಿಸಲು, ಕೆಲವು ಉತ್ತಮ



ಕ್ರಾಂಪನ್‌ಗಳನ್ನು ಖರೀದಿಸಿ. ಇವು ಮೂಲತಃ ನಿಮ್ಮ ಬೂಟುಗಳಿಗೆ ಸಾಕ್ಸ್ ಮತ್ತು ಬಟ್ಟೆಯ ಬದಲು ಅವು ಕೆಳಭಾಗದಲ್ಲಿ ಲೋಹದ ಸ್ಪೈಕ್‌ಗಳೊಂದಿಗೆ ಪ್ಲಾಸ್ಟಿಕ್ ಆಗಿರುತ್ತವೆ. ಸ್ಪೈಕ್‌ಗಳು ನಿಮ್ಮ ತೂಕದೊಂದಿಗೆ ನೆಲಕ್ಕೆ ಅಗೆಯುತ್ತವೆ ಆದ್ದರಿಂದ ನೀವು ಜಾರುವದಿಲ್ಲ, ಅದು ಹೆಚ್ಚು ಸುರಕ್ಷಿತವಾಗಿದೆ.

ಐಸ್ಲ್ಯಾಂಡ್ನಲ್ಲಿನ ಫೋಟೋಗ್ರಾಫಿ ತುಂಬಾ ಆಸಕ್ತಿದಾಯಕವಾಗಿದೆ. ಕಡಿಮೆ ಜನಸಂಖ್ಯೆ ಇರುವದರಿಂದ, ನೀವು ಹಿಂದೆಂದೂ ಮಾನವ ಹೆಜ್ಜೆ ಇಟ್ಟಿರದ ಬಹಳಷ್ಟು ಸ್ಥಳಗಳನ್ನು ನೀವು ಕಾಣುತ್ತೀರಿ! ಇದರರ್ಥ ನಿಮ್ಮ ಫೋಟೋಗಳಲ್ಲಿ ನಾಗರೀಕತೆಯ ಯಾವುದೇ ಚಿಹ್ನೆಗಳು ಇರುವದಿಲ್ಲಾ. ಐಸ್ಲ್ಯಾಂಡ್ನಲ್ಲಿ ವರ್ಷದ ವಿವಿಧ ತಿಂಗಳುಗಳಲ್ಲಿ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯವು ವಿಭಿನ್ನವಾಗಿರುತ್ತದೆ. ಬೇಸಿಗೆಯಲ್ಲಿ ಯಾವಾಗಲೂ ಬೆಳಕು ಇರುತ್ತದೆ, ಆದರೆ ಚಳಿಗಾಲದಲ್ಲಿ ಕೇವಲ 3-5 ಗಂಟೆಗಳ ಕಾಲ ಬೆಳಕು ಇರುತ್ತದೆ

ಐಸ್ಲ್ಯಾಂಡ್ನ ಕೆಲವು ಭಾಗಗಳಲ್ಲಿ ಉಳಿಯಲು ಮತ್ತು ಆನಂದಿಸಲು ಹೆದರಿಕೆಯಾಗಿದ್ದರೂ ಸಹ, ನಾನು ನಿಮಗೆ ಭರವಸೆ ನೀಡುತ್ತೇನೆ, ಇದು ತುಂಬಾ ಸುರಕ್ಷಿತ ದೇಶವಾಗಿದೆ. ಯಾವುದೇ ಮಾನವರು ನೋಡದಂತಹ ಅದ್ಭುತ ದೃಶ್ಯಗಳಿವೆ ಮತ್ತು ಇದು ನಿಮ್ಮ ಚಿತ್ರಗಳನ್ನು ಇನ್ನಷ್ಟು ಉತ್ತಮಗೊಳಿಸುತ್ತದೆ. ಐಸ್ಲ್ಯಾಂಡ್ ಪ್ರವಾಸ ಸಾಹಸಕರ ಆಗಿರಬಹುದು, ಅದರೆ, ಸರಿಯಾದ ಉಡುಪಿನೊಂದಿಗೆ ಮತ್ತು ಎಲ್ಲ ರೀತಿಯ ತಯಾರಿಯಿಂದ ನೀವು ಆನಂದಿಸಬಹುದು. ಐಸ್ಲ್ಯಾಂಡ್ ಬೆಳೆಯುತ್ತಿರುವ ಪ್ರವಾಸಿ ಉದ್ಯಮವಾಗಿದೆ, ಆದ್ದರಿಂದ ನೀವು ಕಳೆದುಹೋದರೆ ನೀವು ಒಬ್ಬಂಟಿಯಾಗಿರುವುದಿಲ್ಲ, ಐಸ್ಲ್ಯಾಂಡಿಕ್ ಜನರು ಬಹಳ ಸಹಾಯಕವಾಗಿದ್ದಾರೆ. ಟೂರ್ ಆಪರೇಟರ್‌ಗಳು ಪ್ರವಾಸಗಳನ್ನು ನೀಡುವ ಅನೇಕ ಸ್ಥಳಗಳಿವೆ, ಅಲ್ಲಿ ನೀವು ತಿಮಿಂಗಿಲಗಳು, ಪಫಿನ್‌ಗಳು, ಅರೋರಾ ಬೋರಿಯಾಲಿಸ್, ಹಿಮನದಿಗಳು, ಐಸ್ ಗುಹೆಗಳು, ಲಾವಾ ಗುಹೆಗಳು ಮತ್ತು ಇನ್ನೂ ಅನೇಕ ಸ್ಥಳಗಳನ್ನು ನೋಡಬಹುದು. ಆದ್ದರಿಂದ, ಐಸ್ಲ್ಯಾಂಡ್ ಒಂದು ಸುಂದರವಾದ ದೇಶವಾಗಿದ್ದು, ಯುರೋಪ್ ಖಂಡಕ್ಕೆ ಹೋಗಲು ಬಯಸುವ ಯಾರಾದರೂ ನೋಡಲೇಬೇಕು!

ನಮ್ಮ ಐಸ್ಲ್ಯಾಂಡ್ ಪ್ರವಾಸದಲ್ಲಿ, ನಾವು ಪ್ರಪಂಚದ ಯಾವುದೇ ಭಾಗದಲ್ಲಿ , ಒಂದೇ ಸ್ಥಳದಲ್ಲಿ ವಿರಳವಾಗಿ ಆನಂದಿಸಬಹುದಾದ , ಬಹಳಷ್ಟು ಮೋಜಿನ ಚಟುವಟಿಕೆಗಳನ್ನು ಮಾಡಿದ್ದೇವೆ. ಅತ್ಯಂತ ನಂಬಲಾಗದ ಕೆಲವು ಇಲ್ಲಿವೆ!

**ಅರೋರಾ ಬೋರಿಯಾಲಿಸ್**

ಅರೋರಾ ಬೋರಿಯಾಲಿಸ್ ಪ್ರವಾಸವು ತುಂಬಾ ಖುಷಿಯಾಯಿತು! ಮೊದಲ ದಿನ ನಾವು ಅರೋರಾ ಬೋರಿಯಾಲಿಸ್ ನೋಡಲು ದೊಡ್ಡ



ದೋಣಿಯಲ್ಲಿ ಹೋದೆವು. ರೇಕ್‌ಜಾವಿಕ್ ಬಳಿಯ ಸಮುದ್ರದಲ್ಲಿ ವೃತ್ತಿಪರರೊಂದಿಗೆ ನಾವು ಹೋಗಿದ್ದೆವು. ಅಲ್ಲಿ ನಾವು ಅರೋರಾ ಬೋರಿಯಾಲಿಸ್ ಅನ್ನು ಎಲ್ಲಿ ಕಾಣಬಹುದು ಎಂದು ಅವರು ತೋರಿಸಿದರು! ಅದು ಮಸುಕಾದಾಗ ಹೇಗೆ ಕಾಣುತ್ತದೆ ಮತ್ತು ಮೋಡವು ಹೇಗೆ ಕಾಣುತ್ತದೆ ಎಂದು ಅವರು ನಮಗೆ ತೋರಿಸಿದರು ಮತ್ತು ಕೆಲವನ್ನು ನಾವು ನೋಡಿದೆವು ಆದರೂ ಅದು ತುಂಬಾ ಮಸುಕಾಗಿತ್ತು, ಮತ್ತು ನಾವು ಹೆಚ್ಚು ಪ್ರಭಾವಿತರಾಗಿರಲಿಲ್ಲ. ನಂತರ, ನಮ್ಮ ಕ್ಯಾಮೆರಾ ತೆಗೆದ ಚಿತ್ರಗಳನ್ನು ನೋಡಿದಾಗ, ಅವರು ವೀಡಿಯೊಗಳಲ್ಲಿ ತೋರಿಸಿದಂತೆಯೇ ಕಾಣುತ್ತದೆ!
ನಾವು ಮರುದಿನ ರೆಕಾವಿಕ್ನಿಂದ (Reykjavik) ಹೊರವಲಯಕ್ಕೆ ಹೋದೆವು, ಅದು ಮಧ್ಯರಾತ್ರಿಯಾಗಿತ್ತು ನಾವು ದೀರ್ಘಕಾಲ ಕಾಯುತ್ತಿದ್ದೆವು, ದಣಿದಿದ್ದೆವು ಮತ್ತು ಮರಳಲು ನಿರ್ಧರಿಸಿದ್ದೆವು. ನಾವು ಹಿಂತಿರುಗುವಾಗ, ಅರೋರಾ ಬೋರಿಯಾಲಿಸ್ ದೀಪಗಳು ಎಂದಿಗಿಂತಲೂ ಸುಂದರವಾಗಿ ತಮ್ಮನ್ನು ತೋರಿಸಿದವು! ನಾವು ಬೆಳಿಗ್ಗೆ 2 ಗಂಟೆಯವರೆಗೆ ನೋಡುತ್ತಿದ್ದೆವು! ಐಸ್ಲ್ಯಾಂಡ್ನಲ್ಲಿ ನೀವು ಹೊಂದಬಹುದಾದ ಅತ್ಯುತ್ತಮ ಅನುಭವಗಳಲ್ಲಿ ಇದು ಒಂದು!

**ಹಿಮನದಿ ಪ್ರವಾಸ**

ನಾವು ಇನ್ನೊಂದು ಪ್ರವಾಸಕ್ಕೆ ಹೋಗಿದ್ದೆವು! ಇದರಲ್ಲಿ, ನಾವು ಹಿಮಪಾತವನ್ನು ತೋರಿಸುವ ಇನ್ನೊಬ್ಬ ವೃತ್ತಿಪರರೊಂದಿಗೆ ಮುಂಜಾನೆ ಹೊರಟೆವು! ಹೆಲ್ಮೆಟ್‌ಗಳು, ಕೊಡಲಿ ಮತ್ತು ಉತ್ತಮ
ಗುಣಮಟ್ಟದ ಕ್ರಾಂಪನ್‌ಗಳಂತಹ ವಿಶೇಷ ಗೇರ್‌ಗಳನ್ನು ಸಹ ಅವರು ನಮಗೆ ಕೊಟ್ಟರು! ಈ ಪ್ರವಾಸದಲ್ಲಿ ನಾವು ಸುತ್ತಮುತ್ತಲಿನ ಪರ್ವತಗಳ ಬಗ್ಗೆ ಉತ್ತಮ ನೋಟವನ್ನು ನೋಡಿದೆವು
ಮತ್ತು ಹಿಮನದಿ ನಿಜವಾಗಿಯೂ ಹೇಗಿದೆ ಎಂಬುದನ್ನು ಅನುಭವಿಸಿದೆವು.

**ಕಪ್ಪು ಮರಳು ಕಡಲತೀರಗಳು** :ನಾವು ಡೈಮಂಡ್ ಬೀಚ್ ಎಂಬ ಕಪ್ಪು ಮರಳಿನ ಬೀಚ್ ನೋಡಲು ಹೋಗಿದ್ದೆವು! ಮರಳಿನ ಮೇಲೆ ಇರುವ ಮಂಜುಗಡ್ಡೆಗಳು ವಜ್ರಗಳಂತೆ ಕಾಣುವುದರಿಂದ ಅದಕ್ಕೆ ಡೈಮಂಡ್ ಬೀಚ್ ಎಂದು ಹೆಸರು ಇದೆ. ಫೋಟೊಗಳನ್ನು
ತೆಗೆದುಕೊಳ್ಳಲು ಇದು ತುಂಬಾ ಸುಂದರ ಮತ್ತು ಆಸಕ್ತಿದಾಯಕ ಸ್ಥಳವಾಗಿದೆ ಮತ್ತು ನೀವು ಹೋದಾಗಲೆಲ್ಲಾ ವಿಭಿನ್ನವಾಗಿರುತ್ತದೆ ಏಕೆಂದರೆ ಮಂಜುಗಡ್ಡೆಗಳು ಕರಗಿ ಬದಲಾಗುತ್ತವೆ. ಅಲ್ಲಿ ಏರುತ್ತಿರುವ ಅಲೆಗಳ





ಬಗ್ಗೆ ಯಾವಾಗಲೂ ಜಾಗರೂಕರಾಗಿರಿ!

ನಾವು ಮತ್ತೊಂದು ಸ್ಥಳವಾದ ರೆನಿಸ್ಫ್ಜಾರಾಗೆ ಹೋಗಿದ್ದೆವು, ಅಲ್ಲಿ ಕೇವಲ ಕಪ್ಪು ಮರಳು ಇರಲಿಲ್ಲ, ಆದರೆ ಅನ್ವೇಷಿಸಲು ಅಗಾಧವಾದ ಗುಹೆಗಳು ಇದ್ದವು. ಇಲ್ಲಿ ಎರಡು ಗುಹೆಗಳು ಸುಮಾರು ಮೂವತ್ತು ಅಡಿಗಳಷ್ಟು ಒಳಗೆ ನಂಬಲಾಗದಷ್ಟು ವಿಶಿಷ್ಟವಾದ ಶಿಲಾ ರಚನೆಗಳನ್ನು ಹೊಂದಿವೆ. ಅವು ಮೊನಚಾದ, ಚಪ್ಪಟೆಯಾದ, ಬೆಲ್ಲದ, ಅಗಾಧವಾದ ಬಂಡೆಯ ತುಂಡುಗಳು ಗಾಳಿಯಿಂದ ಸವೆದು ಇಂದಿನ ಆಕಾರ ಹೊಂದಿವೆ.



**ಜಲಪಾತಗಳು**

ಐಸ್ಲ್ಯಾಂಡ್ನಲ್ಲಿ ಸುಂದರವಾದ ಜಲಪಾತಗಳಿವೆ.

ನಾವು 3 ವಿಭಿನ್ನ ಜಲಪಾತಗಳಿಗೆ ಹೊಗಿದ್ದೆವು, ಅದರಲ್ಲಿ ಗುಲ್‌ಫಾಸ್ ಜಲಪಾತ ಒಂದು. ಎಲ್ಲ ಜಲಪಾತಗಳು ವಿಭಿನ್ನ ಗಾತ್ರಗಳಲ್ಲಿದ್ದವು. ನೆನಪಿನಲ್ಲಿಡಿ, ಅವರನ್ನು ಭೇಟಿ ಮಾಡುವಾಗ, ಅವರ ಬಳಿ ಸಾಕಷ್ಟು ಮಂಜುಗಡ್ಡೆಯಿದೆ ಏಕೆಂದರೆ ಗಾಳಿಯಿಂದ ಸಿಂಪಡಿಸಿದ ಮಂಜು ನೆಲದ ಮೇಲೆ ಹೆಪ್ಪುಗಟ್ಟುತ್ತದೆ, ಆದ್ದರಿಂದ ಕ್ರಾಂಪನ್‌ಗಳನ್ನು ಸಲಹೆ ಮಾಡಲಾಗುತ್ತದೆ. ಜೊತೆಗೆ, ಅಲ್ಲಿ ಸಾಕಷ್ಟು ಗಾಳಿ ಕೂಡ ಇದೆ, ನೀವು ಜಾಗರೂಕರಾಗಿರದಿದ್ದರೆ ಅಕ್ಷರಶಃ ನೀವು ಜಾರಿಕೊಳ್ಳುತ್ತೀರಿ



**ಗೇಸಿರ್**

ಐಸ್ಲ್ಯಾಂಡ್ನಲ್ಲಿನ ಗೇಸಿರ್ ಮೂಲತಃ ಗೀಸರ್ಗಳ ಗುಂಪಾಗಿದೆ! ಅವೆಲ್ಲವೂ ಒಂದೇ ಸ್ಥಳದಲ್ಲಿದೆ ಮತ್ತು ಇದು ಐಸ್ಲ್ಯಾಂಡ್‌ನ ಅತ್ಯಂತ ಪ್ರಸಿದ್ಧ ಸ್ಥಳವಾಗಿದೆ (ಅವರು ವಿಮಾನದಲ್ಲಿ ಅದಕ್ಕಾಗಿ ಜಾಹೀರಾತನ್ನು ಸಹ ತೋರಿಸುತ್ತಾರೆ). ಅವು ಗಾತ್ರದಲ್ಲಿ ಬದಲಾಗುತ್ತವೆ, ಅವುಗಳಲ್ಲಿ ಕೆಲವು ನಿಜವಾಗಿಯೂ ಸ್ಫೋಟಗೊಳ್ಳುವುದಿಲ್ಲ, ಆದರೆ ಇವೆಲ್ಲವೂ ಗುಳ್ಳೆ ಮತ್ತು ಕೊಳೆತ ಮೊಟ್ಟೆಗಳಂತಹ ದುರ್ವಾಸನೆಯನ್ನು ಬಿಡುಗಡೆ ಮಾಡುತ್ತವೆ. ಇದಕ್ಕೆ ಕಾರಣ ಗಂಧಕದ ಸಾಂದ್ರತೆಯನ್ನು ಹೊಂದಿರುವುದು. ಅತ್ಯಂತ ಪ್ರಸಿದ್ಧ ಗೀಸರ್ ಒಂದರಲ್ಲಿ ಪ್ರತಿ ಹದಿನೈದು ನಿಮಿಷಕ್ಕೆ ಸರಾಸರಿ 45 ರಿಂದ 60 ಅಡಿಗಳಷ್ಟು ಗಾಳಿಯಲ್ಲಿ ಮೇಲಕ್ಕೆ ಹೋಗುತ್ತದೆ. ಇದು ನಿಜವಾಗಿಯೂ ಬಹಳ ವಿಶಿಷ್ಟವಾದ ಸ್ಥಳವಾಗಿದೆ.

**ದಿ ಬ್ಲೂ ಲಗೂನ್**

ಇದು ಐಸ್ಲ್ಯಾಂಡ್ನಲ್ಲಿ ನನ್ನ ನೆಚ್ಚಿನ ಸ್ಥಳವಾಗಿದೆ! ಅದು ಅಕ್ಷರಶಃ ಅವರು ಹೇಳಿದಂತೆಯೇ ಒಳ್ಳೆಯದು! ಮೊದಲಿಗೆ, ನೀವು ಆಧುನಿಕ ಕಟ್ಟಡವನ್ನು ಪ್ರವೇಶಿಸುತ್ತೀರಿ ನಂತರ ಅವರು ನಿಮ್ಮ ಲಾಕರ್ ಅನ್ನು ತೆರೆಯಲು, ಪಾನೀಯಗಳನ್ನು ಖರೀದಿಸಲು ಮತ್ತು ಇನ್ನೂ ಹೆಚ್ಚಿನದನ್ನು ಮಾಡುವಂತಹ ಕಂಕಣವನ್ನು ನಿಮಗೆ ಒದಗಿಸುತ್ತಾರೆ. ನಂತರ, ನೀವು ಮಾಡಬೇಕಾದುದೆಂದರೆ ನಿಮ್ಮ ವಸ್ತುಗಳನ್ನು ನಿಮ್ಮ ಲಾಕರ್‌ನಲ್ಲಿ ಇರಿಸಿ, ಸ್ನಾನ ಮಾಡಿ, ತದನಂತರ ನೀರಿನಲ್ಲಿ ಜಿಗಿಯಿರಿ! ನೀರಿನ ಮೊದಲ ಸ್ಪರ್ಶದಿಂದ, ಇದು ಖಂಡಿತವಾಗಿಯೂ ಯೋಗ್ಯವಾಗಿದೆ ಎಂದು ನೀವು ಹೇಳಬಹುದು. ನೀವು ಸುತ್ತಲೂ ತೇಲುತ್ತಿರುವಾಗ, ಅವರು ಒದಗಿಸುವ ಫೇಸ್‌ಮಾಸ್ಕ್‌ಗಳು ಮತ್ತು ಪಾನೀಯಗಳನ್ನು ಆನಂದಿಸಬಹುದು. ಹಿಮಭರಿತ ಹಿನ್ನೆಲೆಯೊಂದಿಗೆ ಬೆಚ್ಚಗಿನ ನೀರು ಕಣ್ಣಿಗೆ ಸುಂದರವಾಗಿರುತ್ತದೆ ಮತ್ತು ಅನುಭವವು ಮನಸ್ಸಿಗೆ ಸಂತೋಷವೊದಗಿಸುತ್ತದೆ. ನಾನು ಬೇರೆ ಏನನ್ನೂ ಹೇಳಲು ಬಯಸುವದಿಲ್ಲ, ಆದರೆ ನೀವು ಹೊರಗೆ ಬಂದಾಗ ನಾನು ಹೇಳಬಲ್ಲೆ, ನೀವು ನಿಮ್ಮಂತೆ ಅನಿಸುವುದಿಲ್ಲ!







# ವರುಷವಿಪ್ಪತ್ತರ ಎರಡು.. ಜೊತೆಯಿರೆ

*ಡಾ. ಅಶೋಕ್ ಕಟ್ಟಿಮನಿ*

ವರುಷವಿಪ್ಪತ್ತರ ಎರಡು.. ಜೊತೆಯಿರೆ
ಎರಡು ...

ತುಂಬುತಿರೆ ವರುಷ
ತರುತಲಿದೆ ಹರುಷ
ಕರಗುತಿರೆ ನಿನ್ನೆ
ಕರೆಯುತಿದೆ ತನ್ನೆ

ಹೊಸ ಮನಸು
ಹೊಸ ಹುರುಪು
ಕಾಣುತಿಹರು ಕನಸು
ನೆಡೆಸಿಕೊಡು ನನಸು

ಬದುಕಿನಾ ದಾರಿಯಲಿ
ಜೊತೆಯಿರಲೀ ಎರಡು
ನೆರೆಯಾದವರ ನೆನೆಯುವುದೊಂದು
ಪರರಿಗೀವ ಸಂತಸವಿನ್ನೊಂದು

ಜೀವನದ ದಾರಿಯಲಿ
ಎನಿತೆನಿತರಿಗೋ ಋಣಿ
ದಾತರೆಲ್ಲರ ನೆನೆಯುತಲಿ
ದಿನವು ಕೈಮುಗಿಯುತಲಿ

ಹರಡುತಿರು ಪ್ರೀತಿ
ಹರಡುವುದು ಜಗತ್ಶಾಂತಿ
ವರುಷಗಳುರಿದರು ಉಳಿಯುವುದು
ನಮಗಿತ್ತ ನಗೆಹೂವು

ಎರಡೆಂಬೀ ಪಂಕ್ತಿ
ಜಯವೆಂದಿಗೂ ಬುತ್ತಿ
ವರುಷವೆರಡು ಇಪ್ಪತ್ತು
ಇಮ್ಮಡಿಸಲೆಮ್ಮ ತಾಕತ್ತು







# ಛಾಯಾಚಿತ್ರ

*ದೀಪ್ತಿ ಗಡ್*



# ಛಾಯಾಚಿತ್ರ

